ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 142 RNI Number : KNKAN/25/A2770 31-05-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :142 ರಾಯಚೂರು 31-05-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಕಾಂಗ್ರೆಸ್ ಪಕ್ಷದ ನೂತನ ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದೊಂದಿಗೆ ಡಿ.ಕೆ.ಶಿ ಆಯ್ಕೆ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ.ಶಿವಕುಮಾರ್ ಅವರು ಸರ್ವಾನುಮತದಿಂದ ಆಯ್ಕೆ ಆಗಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಸಭೆಯಲ್ಲಿ ನೂತನ ಆಯ್ಕೆ ನಡೆಯಿತು. ಹೊಸ ಶಾಸಕಾಂಗ ಪಕ್ಷದ ನಾಯಕರಾಗಿ ಡಿ ಕೆ ಶಿವಕುಮಾರ್ ಅವರ ಹೆಸರನ್ನು ಸಿಎಂ ಸಿದ್ದರಾಮಯ್ಯ ಅವರು ಸೂಚಿಸಿದರು. ಡಾ. ಜಿ ಪರಮೇಶ್ವರ್ ಅವರು ಅನುಮೋದಿಸಿದರು. ಇದನ್ನು ಸಭೆಯು ಒಕ್ಕೊರಲಿನಿಂದ ಬೆಂಬಲಿಸಿತು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯಾಗಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಘೋಷಿಸಿದರು. ಇದಕ್ಕೂ ಮೊದಲು ಸಭೆಯ ಆರಂಭದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ಪ್ರಕ್ರಿಯೆಯು ಸಿಎಂ ಸಿದ್ದರಾಮಯ್ಯ ಅವರ ಪ್ರಸ್ತಾವನೆಯೊಂದಿಗೆ ನಡೆಯಲಿದೆ ಎಂದು ಎಐಸಿಸಿ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಪ್ರಕಟಿಸಿ, ಚಾಲನೆ ನೀಡಿದರು.

ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ವಿಚಾರವನ್ನು ಎಐಸಿಸಿ ವಿವೇಚನೆಗೆ ಬಿಡಲಾಗಿದೆ ಎಂಬ ಒಂದು ಸಾಲಿನ ನಿರ್ಣಯವನ್ನು ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದರು. ಪರಮೇಶ್ವರ್ ಅವರು ಅನುಮೋದಿಸಿದರು. ಬಳಿಕ ಎಲ್ಲ ಶಾಸಕರು ಕೈ ಎತ್ತುವ ಮೂಲಕ ಇದನ್ನು ಬೆಂಬಲಿಸಿದರು. ನಂತರ 10 ನಿಮಿಷಗಳ ವಿರಾಮ ನೀಡಲಾಗಿದೆ ಎಂದು ಸುರ್ಜೆವಾಲ ಹೇಳಿದರು. ಸಿಎಂ ಸಿದ್ದರಾಮಯ್ಯ, ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ ಅವರು ಸಿಎಂ ಕೊಠಡಿಗೆ ತೆರಳಿದರು. ಅಲ್ಲಿಂದ ಸಮ್ಮೇಳನ ಸಭಾಂಗಣಕ್ಕೆ ಮೂವರು ವಾಪಸ್ ಬಂದ ನಂತರ ಶಾಸಕಾಂಗ ಪಕ್ಷದ ನೂತನ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿತು.

ನಂತರ ನೂತನ ನಾಯಕ ಡಿ.ಕೆ.ಶಿವಕುಮಾರ್ ಅವರು ನಿರ್ಗಮಿತ ನಾಯಕ ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಅವಧಿಯ ಸೇವೆಯನ್ನು ಕೊಂಡಾಡುವ ನಿರ್ಣಯ ಮಂಡಿಸಿ, ಸಭೆಯ ಬೆಂಬಲ ಕೋರಿದರು. ಸಭೆ ಒಕ್ಕೋರಲಿನಿಂದ ಬೆಂಬಲಿಸಿತು.

ಸಭೆಯಲ್ಲಿ ಕೈಗೊಂಡ ನಿರ್ಣಯ: ಕರ್ನಾಟಕದ ಜನತೆಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ನೀಡಿರುವ ವಿಶಿಷ್ಟ ಸೇವೆಯನ್ನು ಸ್ಮರಿಸಿ, ಕಾಂಗ್ರೆಸ್ ಶಾಸಕಾಂಗ ಪಕ್ಷವು ಸಿದ್ದರಾಮಯ್ಯ ಅವರಿಗೆ ಹೃತೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತದೆ.

ಅವರು 2013-2018 ಮತ್ತು 2023-2026 ರವರೆಗೆ ಮುಖ್ಯಮಂತ್ರಿಯಾಗಿ ಹಾಗೂ ಎರಡು ಅವಧಿಗಳಲ್ಲಿ ಪ್ರತಿಪಕ್ಷದ ನಾಯಕರಾಗಿ ಸಲ್ಲಿಸಿದ ಸೇವೆಯನ್ನು ಜನತೆ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಯಾವಾಗಲೂ ಅಪಾರ ಪ್ರೀತಿ ಹಾಗೂ ಹೆಮ್ಮೆಯಿಂದ ಸ್ಮರಿಸುತ್ತಾರೆ. ಸಾಮಾಜಿಕ ನ್ಯಾಯದ ಮೇಲಿನ ಅವರ ಸಮರ್ಪಣಾ ಭಾವ, ಆಡಳಿತಾತ್ಮಕ ಸಾಮರ್ಥ್ಯ, ಪಕ್ಷದ ಸಿದ್ಧಾಂತಕ್ಕೆ ಅವರ ಬದ್ಧತೆ ಮತ್ತು ಪಕ್ಷದ ನಾಯಕತ್ವದಲ್ಲಿನ ಅವರ ಸಂಪೂರ್ಣ ನಂಬಿಕೆಯು ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಅನುಕರಿಸಬೇಕಾದ ಮಾದರಿಯಾಗಿದೆ.

ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರವು ಯಾವಾಗಲೂ ಇದೇ ಆದರ್ಶಗಳ ಹಾದಿಯಲ್ಲಿ ಮುನ್ನಡೆಯುತ್ತದೆ. ನಾವು ಅವರಿಗೆ ನಮ್ಮ ಹೃದಯದಾಳದಿಂದ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಕರ್ನಾಟಕದ ಜನತೆಯ ಸೇವೆ ಮಾಡಲು, ಪ್ರತಿಯೊಂದು ವಲಯದಲ್ಲೂ ಪರಿವರ್ತನಾತ್ಮಕ ಅಭಿವೃದ್ಧಿಯನ್ನು ತರಲು ಮತ್ತು ಕನ್ನಡಿಗರ ಜೀವನದಲ್ಲಿ ಬದಲಾವಣೆ ತರಲು ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಈ ಪಯಣದಲ್ಲಿ ಅವರ ನಿರಂತರ ಪಾಲ್ಗೊಳ್ಳುವಿಕೆ ಮತ್ತು ಮಾರ್ಗದರ್ಶನವನ್ನು ನಾವು ಸದಾ ಬಯಸುತ್ತೇವೆ ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು.



ರುದ್ರಪ್ಪ ಲಮಾಣಿ, ಬೋಸರಾಜ ಅವರಿಗೆ ಸಚಿವ ಸ್ಥಾನ ನೀಡಲು ಬಂಜಾರ್ ಸಂಘ ಒತ್ತಾಯ



ರಾಯಚೂರು.ಮೇ.30-

ಬಜಾರ್ ಸಮಾಜದ ಏಕೈಕ ಹಾವೇರಿಯ ಶಾಸಕರಾದ ರುದ್ರಪ ಲಮಾಣಿ ಹಾಗೂ ಜಿಲ್ಲೆಯ ಸಚಿವ 'ರಾಗಿದ್ದ ಎನ್.ಎಸ್. ಬೋಸರಾಜ್ ಅವರಿಗೆ ಮುಂದಿನ ಡಿ.ಕೆ.ಶಿವ ಕುಮಾರ ನೇತೃತ್ವದ ಸಚಿವ ಸಂಪುಟ ದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಅಲ್ ಇಂಡಿಯಾ ಬಂಜಾರ್ ಸೇವಾ ಸಂಘದ ಒತ್ತಾಯವಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಅಮರೇಶ ರಾಠೋಡ್ ಹೇಳಿದರು.

ಅವರಿಂದು ನಗರದ ಮಾತ ನಾಡಿ, ಸಿದ್ದರಾಮಯ್ಯ ಮುಖ್ಯ ಮಂತ್ರಿ ಸಂದರ್ಭದಲ್ಲಿ ಬಂಜಾರ ಸಮಾಜಕ್ಕೆ ಅನ್ಯಾಯವಾಗಿದೆ. ಸಮಾಜದ ಶಾಸಕರಿಗೆ ಸಚಿವ ಸ್ಥಾನ ನೀಡದೇ ಕಾಂಗ್ರೆಸ್ ಪಕ್ಷ ಅನ್ಯಾಯ ಮಾಡಿದೆ. ಈಗ ಡಿ.ಕೆ.ಶಿವಕುಮಾರ ನೇತ್ರತ್ವದ ಸಚಿವ ಸಂಪುಟದಲ್ಲಿ ಬಂಜಾರ್ ಸಮಾಜದ ಏಕೈಕ ಶಾಸಕ 'ರಾದ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಅದೇ ರೀತಿ ಜಿಲ್ಲೆಯ ಹಿರಿಯ ರಾಜಕರಣಿ ಎಲ್ಲ ಸಮಾಜಗಳನ್ನು ಒಗ್ಗಟಗಿ ತೆಗೆದುಕೊಂಡು ಹೋಗುವ ಹಾಗೂ ಬಂಜಾರ್ ಸಮಾಜದ ಅಭಿವೃದ್ದಿಗೆ ಸದ್ದ ಬದ್ದರಾಗಿರುವ ಜಿಲ್ಲೆಯ ಸಚಿವರಾಗಿದ್ದ ಎನ್.ಎಸ್. ಬೋಸರಾಜ್ ಅವರಿಗೆ ಮೊತ್ತಮ್ಮೆ ಸಚಿವರನ್ನಾಗಿ ಮಾಡಬೇಕೆಂದು ಒತ್ತಾಯಿಸಿದರು.

ಸಮಾಜದ ರಾಜ್ಯ ಉಪಾಧ್ಯಕ್ಷರಾದ ಗೋವಿಂದ್ ವಕೀಲರು ಮಾತನಾಡಿ, ಸಮಾಜದ ಏಕೈಕ ಶಾಸಕರಾದ ರುದ್ರಪ್ಪ ಲಮಾಣಿ ಅವರು ಉಪ ಸಭಾಪತಿಗಳಾಗಿ ಕಾರ್ಯನಿರ್ವಹಿಸಿದ ಅನುಭವ ವಿದ್ದು, ಹಾಗೂ ಕಾಂಗ್ರೆಸ್ ಪಕ್ಷದ ಸಂಘಟನೆಗೆ ದುಡಿದಿದ್ದು, ಈ ಬಾರಿಯ ಡಿ.ಕೆ.ಶಿವಕುಮಾರ ನೇತ್ರತ್ವ ದಲ್ಲಿ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡುವ ಮೂಲಕ ಬಂಜಾರ ಸಮಾಜಕ್ಕೆ ಆದ್ಯತೆ ನೀಡಬೇಕು ಹಾಗೂ ಜಿಲ್ಲೆಯ ಹಿರಿಯ ರಾಜಕರಣಿ ಹಾಗೂ ಹಾಲಿ ಸಚಿವರಾಗಿದ್ದ ಎನ್.ಎಸ್. ಬೋಸರಾಜ್ ಅವರಿಗೆ ಮೊತ್ತಮ್ಮೆ ಸಚಿವ ಸ್ಥಾನ ನೀಡುವ ಮೂಲಕ ಜಿಲ್ಲೆಗೆ ಆದ್ಯತೆ ನೀಡಿಬೇಕೆಂದರು. ಸಚಿವ ಎನ್.ಎಸ್. ಬೋಸರಾಜ ಅವರು ಬಂಜಾರ್ ಸಮಾಜದ ಅಭಿವೃದ್ದಿ ಅನೇಕ ಯೋಜನೆಗಳ ಮೂಲಕ ಸಹಾಯ ಸಹಕಾರ ನೀಡಿದ್ದಾರೆ. ಅನೇಕ ಬಂಜಾರ ಭವನಗಳ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಿಸಿದ್ದಾರೆ. ಸಮಾಜದ ಯಾವುದೇ ಸಂಕಷ್ಟ ಸಮಸ್ಯೆ ಇದ್ದರೂ ಪರಿಹಾರಿಸುವಲ್ಲಿ ಸತತ ಶ್ರಮಿಸಿದ್ದಾರೆ. ಅದರಿಂದ ಎನ್.ಎಸ್. ಬೋಸರಾಜ್ ಅವರಿಗೂ ಮತ್ತೊಮ್ಮ ಸಚಿವ ಸ್ಥಾನ ನೀಡುವ ಮೂಲಕ ಜಿಲ್ಲೆಯ ಅಭಿವೃದ್ದಿಗೆ ಸಹಕಾರ ನೀಡಬೇಕೆಂದು

3ನೇ ಪುಟ.....

ಮತದಾರರ ತೀವ್ರ ಪರಿಷ್ಕರಣೆ ಎಸ್‌ಐಆರ್ ವಿರೋಧಿಸಿ ಪ್ರತಿಭಟನಾ ಜಾಥಾ



ರಾಯಚೂರು, ಮೇ.30-

ಅಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ವಿರೋಧಿ ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ವಿರೋಧಿಸಿ ಜಾತ್ಯತೀತ ಪಕ್ಷಗಳು-ಜನಪರ ಸಂಘಟನೆಗಳ ಒಕ್ಕೂಟದ ಮುಖಂಡರು ನಗರದ ಅಂಬೇಡ್ಕರ್ ವೃತ್ತದಿಂದ ಟಿಪ್ಪು ಸುಲ್ತಾನ್ ಗಾರ್ಡನ್ ವರೆಗೆ ಮರವಣಿಗೆ ಜಾಥ ನಡೆಯಿತು. ಚುನಾವಣೆ ಅಯೋಗ ನಡೆಸುತ್ತಿರುವ ಮತದಾರ ತೀವ್ರ ಪರಿಷ್ಕರಣೆ ಪಾರದರ್ಶಕವಾಗಿಲ್ಲ ಕೇಂದ್ರ ಸರಕಾರದ ಸರ್ವಾಧಿಕಾರ ಧೋರಣೆ ಆಗಿದೆ ಎಂದು ಕೇಂದ್ರ ಸರಕಾರ ವಿರುದ್ದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಅರ್ಹ ಮತದಾರರನ್ನು ಪ್ರಜಾಸತ್ತಾತ್ಮಕ ವ್ಯವಸ್ಥೆಯಿಂದ ಹೊರಗಟ್ಟುವ ಕೇಂದ್ರ ಸರಕಾರದ ಸಂಚು ಇದಾಗಿದೆ ಎಂದು ಕೇಂದ್ರದ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಮತದಾರ ಪಟ್ಟಿ ತೀವ್ರ ಪರಿಷ್ಕರಣೆಗೆ ವಿರೋಧವಿಲ್ಲ ಅದು ಪಾರದರ್ಶಕ ನಡೆಸಬೇಕೆಂದರು.

ಕೇಂದ್ರ ಸರಕಾರ ದೇಶದಲ್ಲಿ ಅಧಿಕಾರಕ್ಕೆ ಬಂದು 12 ವರ್ಷಗಳು ಕಳೆದರೂ ಬಾಂಗ್ಲಾದೇಶ ನುಸುಲು ಕೋರರನ್ನು ಪತ್ತೆ ಹಚ್ಚಿಲ್ಲ. ಎಸ್ ಐ ಆರ್ ಮೂಲಕ ಕೇಂದ್ರ ಸರಕಾರ

3ನೇ ಪುಟ.....



ಎಸ್‌ಬಿಐ: ಮೃತರ ಕುಟುಂಬಕ್ಕೆ 2 ಲಕ್ಷ ಪರಿಹಾರ

ರಾಯಚೂರು, ಮೇ.30-ಅಕಾಲಿಕ ಮರಣ ಹೊಂದಿದ ಮೃತರ ಕುಟುಂಬ ಪಿಎಂಜೆಜೆಬಿವೈ ಯೋಜನೆಯಡಿ 2 ಲಕ್ಷ ಪರಿಹಾರ ವಿತರಣೆ ಮಾಡಲಾಯಿತು.

ನಗರದ ಸ್ಥಳೀಯ ಲಿಂಗಸೂಗೂರು ರಸ್ತೆಯಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಯ ಗ್ರಾಹಕರಾಗಿದ್ದ ಬಲವಂತ ಅಣಗಿ ಅವರ ಕುಟುಂಬಕ್ಕೆ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಅಡಿಯಲ್ಲಿ 2 ಲಕ್ಷ ಮೊತ್ತದ ವಿಮಾ ಪರಿಹಾರದ ಚೆಕ್ ವಿತರಿಸಲಾಯಿತು.

ಬ್ಯಾಂಕಿನ ಪ್ರಾದೇಶಿಕ ವ್ಯವಸ್ಥಾಪಕರು ಸೀತಾಬಾಯಿ ಅವರು ಮೃತರ ಪತ್ನಿ ಬುದೆಮ್ಮ ಅಣಗಿ ಅವರಿಗೆ ಬ್ಯಾಂಕ್ ಶಾಖೆಯಲ್ಲಿ ಅಧಿಕೃತವಾಗಿ ಚೆಕ್ ಹಸ್ತಾಂತರಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಬ್ಯಾಂಕ್ ಅವರು, ಗ್ರಾಹಕರು ಬ್ಯಾಂಕ್ ಖಾತೆಯೊಂದಿಗೆ ಮಾಡಿಸುವ ಇಂತಹ ಸಣ್ಣ ಉಳಿತಾಯದ ವಿಮಾ ಯೋಜನೆಗಳು ಕುಟುಂಬದ ಮುಖ್ಯಸ್ಥರನ್ನು ಕಳೆದುಕೊಂಡ ಕಷ್ಟದ ಸಮಯದಲ್ಲಿ ಆಸರೆಯಾಗುತ್ತವೆ. ಸಾರ್ವಜನಿಕರು ಇಂತಹ ಸರ್ಕಾರದ ವಿಮಾ ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.ಈ ಸಂದರ್ಭದಲ್ಲಿ ಲಿಂಗಸೂಗೂರು ರಸ್ತೆ ಎಸ್ ಬಿ ಐ ಶಾಖೆಯ ಮ್ಯಾನೇಜರ್ ನರಸಿಂಹಲು ನಾಯಕ,ಬ್ಯಾಂಕಿನ ಸಿಬ್ಬಂದಿ ವರ್ಗದವರು ಹಾಗೂ ಮೃತರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ರೈತರಿಗೆ ಬಿತ್ತನೆಯ ಬೀಜ, ರಸಗೊಬ್ಬರ, ಡೀಸಲ್‌ನ್ನು ಸಮರ್ಪಕವಾಗಿ ಪೂರೈಸಲು ಒತ್ತಾಯ



ಲಿಂಗಸುಗೂರು,ಮೇ.29-

ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ಲಿಂಗಸುಗೂರು ಹಾಗೂ ಮಸ್ಕಿ ತಾಲೂಕಿನ ರೈತರಿಗೆ ಡಿಸೇಲ್, ರಸಗೊಬ್ಬರ, ಬಿತ್ತನೆ ಬೀಜ ಮತ್ತು ಬೆಳೆ ವಿಮೆ ಸಂಬಂಧಿತ ತೊಂದರೆಗಳು ಉಂಟಾಗದಂತೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ರೈತ ಬಾಂಧವರು ಸಹಾಯಕ ಆಯುಕ್ತ ಬಸಣ್ಣಪ್ಪ ಕಲಶೆಟ್ಟಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಮಳೆ ಆರಂಭವಾಗಿರುವುದರಿಂದ ರೈತರು ಜಮೀನುಗಳನ್ನು ಸಿದ್ದಪಡಿಸಿ ಬಿತ್ತನೆ ಕಾರ್ಯಕ್ಕೆ ಮುಂದಾಗಿದ್ದಾರೆ. ಆದರೆ ಡಿಸೇಲ್ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ತೀವ್ರ ತೊಂದರೆ ಉಂಟಾಗಿದೆ, ಬಂಕ್‌ಗಳಲ್ಲಿ ಕ್ಯಾನ್‌ನಲ್ಲಿ ಡಿಸೇಲ್ ನೀಡುವುದಿಲ್ಲ ಎಂದು ಹೇಳಲಾಗುತ್ತಿದ್ದು, ಟ್ರ್ಯಾಕ್ಟರ್‌ಗಳನ್ನು ನೇರವಾಗಿ ಬಂಕ್‌ಗೆ ತರಬೇಕು ಎಂಬ ನಿಯಮದಿಂದ ಗ್ರಾಮೀಣ ಭಾಗದ ರೈತರಿಗೆ ಸಂಕಷ್ಟ ಎದುರಾಗಿದೆ ಎಂದು ತಿಳಿಸಿದ್ದಾರೆ.

3ನೇ ಪುಟ.....

ಆಕಸ್ಮಿಕ ವಿದ್ಯುತ್ ತಗುಲಿ 20 ವರ್ಷದ ಯುವಕ ಸಾವು

ಲಿಂಗಸಗೂರು : ಮೇ,30 -



ಲಿಂಗಸ್ಗೂರು ತಾಲೂಕಿನ ಹಾಲಭಾವಿ ತಾಂಡದ ಅಮರೇಶ್ ರಾಠೋಡ್ ತಂದೆ ರಾಮಣ್ಣ ರಾಠೋಡ್ 20 ವರ್ಷದ ಯುವಕ ಆಕಸ್ಮಿಕ ವಿದ್ಯುತ್ ತಗುಲಿ ಮೃತಪಟ್ಟ ಘಟನೆ ಹಾಲಬಾವಿ ತಾಂಡದಲಿ ನಡೆದಿದೆ.

ಅಮರೇಶ ರಾಠೋಡ್ ತಂದೆ ರಾಮಣ್ಣ ಈತನು ಮನೆ ಹಿಂದೆ ಜೋರಾಗಿ ಶಬ್ದ ಕೇಳಿದಾಗ ಮನೆ ಹಿಂದೆ ಏನಾಯಿತೆಂದು ನೋಡಲು ಹೋದಾಗ ಕಂಬದ ಮೇಲಿರುವ ವೈರಗಳಲ್ಲಿ, ಬೆಂಕಿ ಹತ್ತುತ್ತಿಕೊಂಡಿದ್ದು ಅಲ್ಲಿಂದ ಗಾಬರಿಗೊಂಡು ಕೂಗಾಡಿದಾಗ ಏನಾಯಿತೆಂದು ಮನೆಯವರೆಲ್ಲರೂ ನೋಡಲಾಗಿ ನನ್ನ ಮಗನಾದ ಅಮರೇಶ ರಾಠೋಡ್ ಈತನು ನನ್ನ ಮನೆ ಹಿಂದೆ ಇರುವ ಕಂಬದ ಹತ್ತಿರ ಮೂರ್ಛೆ ಬಿದ್ದಿದ್ದು ನಾವು ಹೋಗಿ ನಿನಗೆ ಏನಾಗಿದೆ ಎಂದು ಕೇಳಿದಾಗ ನನಗೆ ಕರೆಂಟ್ ಶಾಕ್ ಹೊಡೆದಿದೆ. ಇದರಿಂದ ನನಗೆ ಮೇಲೆಳಲು ಆಗುವುದಿಲ್ಲಾ. ನಿವೆಲ್ಲರೂ

3ನೇ ಪುಟ.....



ಶ್ರೀನಿಮಿಷಾಂಬ ದೇವಿ ದೇವಸ್ಥಾನದಲ್ಲಿ ಮಹಿಳೆಯರಿಂದ ಭಜನೆ

ರಾಯಚೂರು,ಮೇ.30-

ಶ್ರಿ ನಿಮಿಷಾಂಬ ದೇವಿ ದೇವಸ್ಥಾನದಲ್ಲಿ ದಿನಾಂಕ 29/05/2026 ಅದಿಕ ಜ್ಯೇಷ್ಠ ಶುಕ್ಲ ತ್ರಯೋದಶಿ, ಶುಕ್ರವಾರ ಅಧಿಕ ಜ್ಯೇಷ್ಠ ಮಾಸದ ಪ್ರಯುಕ್ತ ವಿಶೇಷ 33 ಹಾಡುಗಳ ಭಜನೆ ಕಾರ್ಯಕ್ರಮ ಹಾಗೂ ಮಹಿಳೆಯರಿಗೆ ಅರಿಶಿನ ಕುಂಕುಮ ತಾಂಬೂಲ ನೀಡುವ ಕಾರ್ಯಕ್ರಮ ಆಯೋಜಿಸಲಾಗಿತ್ತು..

ಆದ್ದರಿಂದ ಅಧಿಕಮಾಸದ ಈ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಮಹಿಳೆಯರು ಪಾಲ್ಗೊಂಡು ಅದಿಕ ಮಾಸದ ನಿಯಾಮಕ ಪುರುಷೋತ್ತಮ ದೇವರ ಹಾಗೂ ದೇವಿಯ ಕೃಪೆಗೆ ಪಾತ್ರರಾದರು.

ಶಾಸಕ ಎಂ.ವೈ.ಪಾಟೀಲರಿಗೆ ಸಚಿವ ಸ್ಥಾನ ,ಡಿಸಿಎಂಯಾಗಿ ಪ್ರಿಯಾಂಕ್ ಖರ್ಗೆ ಸಿಗಲಿ

ಅಫಜಲಪುರ,ಮೇ30-

ಹಲವು ಇಲಾಖೆಗಳಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿದ ಪ್ರಿಯಾಂಕ್ ಖರ್ಗೆರವರಿಗೆ ರಾಜ್ಯದ ಉಪಮುಖ್ಯಮಂತ್ರಿ ಸ್ಥಾನ ನೀಡ ಬೇಕು ಅದೆ ರೀತಿಯಾಗಿ ಅಫಜಲ ಪುರ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿರುವ ಹಿರಿಯ ಮುತ್ಸದ್ದಿ ಶಾಸಕ ಎಂ.ವೈ. ಪಾಟೀಲ ಅವರು ಬುದ್ದ ಬಸವ ಹಾಗೂ



ಅಂಬೇಡ್ಕರರ ತತ್ವಗಳನ್ನು ಅಳವಡಿಸಿಕೊಂಡು ಸರ್ವ ಸಮುದಾಯದವರ ಅಭಿ ವೃದ್ಧಿ ಮಾಡುತ್ತಿದ್ದಾರೆ.ಆದ್ದರಿಂದ ಸಂಪುಟದಲ್ಲಿ ಸ್ಥಾನ ನೀಡಬೇಕು' ಎಂದು ಬ್ಲಾಕ್ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷೆ ಬಿಸ್ಮಿಲ್ಲಾ ಪಿರವಾಲೆ ಕಾಂಗ್ರೆಸ್ ಪಕ್ಷದ ವರಿಷ್ಠರಿಗೆ ಒತ್ತಾ ಯಿಸಿದ್ದಾರೆ.

ಸಂವಿಧಾನದ ಮೌಲ್ಯಗಳ ಪರವಾಗಿ ಸದಾ ಗಟ್ಟಿ ಧ್ವನಿಯಾ ಗಿರುವ ಕಲ್ಯಾಣ ಕರ್ನಾಟಕ ಭಾಗದ ದಕ್ಷ ನಾಯಕರಾಗಿ, 40 ವರ್ಷಗಳ ಹಿಂದೆ ಈ ಭಾಗದಲ್ಲಿ ಶಿಕ್ಷಣ ಸಂಸ್ಥೆ ಯನ್ನು ಮಾಡಿ ಲಕ್ಷಾಂತರ ಯುವಕರ ಬಾಳಿಗೆ ಬೆಳಕಾಗಿದ್ದಾರೆ.ಸಹಕಾರ ಸಂಘದಲ್ಲಿ ಸಾಕಷ್ಟು ಕೆಲಸ ಮಾಡಿದ ಅವರು ಈ ಭಾಗದಲ್ಲಿ ಸಣ್ಣಪುಟ್ಟ ವ್ಯಾಪಾರಸ್ಥರಿಗೆ, ರೈತರಿಗೆ ಸಾಕಷ್ಟು ಆರ್ಥಿಕ ನೆರವು ನೀಡಿದ್ದಾರೆ. ಈ ಎಲ್ಲಾ ಕೆಲಸ ಕಾರ್ಯಗಳನ್ನು ಪರಿಗಣಿಸಿ ಎಂ.ವೈ.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು. ಹಾಗೆ ಕಲ್ಯಾಣ ಕರ್ನಾಟಕದ ಧೀಮಂತ ನಾಯಕ ಪ್ರಿಯಾಂಕ್ ಖರ್ಗೆರವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡ ಬೇಕು' ಎಂದು ಕಾಂಗ್ರೆಸ್ ಹೈಕಮಾಂ ಡ್‌ಗೆ ಒತ್ತಾಯಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ಪದಾಧಿಕಾರಿಗಳ ಸಭೆ



ಸಿಂಧನೂರು,ಮೇ.30-

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ. ರಾಯಚೂರು ಜಿಲ್ಲಾ ಅಧ್ಯಕ್ಷರಾದ ಗಂಗಣ್ಣ ಡಿಶ್ ರವರ ಅಧ್ಯಕ್ಷತೆಯಲ್ಲಿ. ಇಂದು ಸಿಂಧನೂರು ನಗರದ ಸರ್ಕ್ಯೂಟ್ ಹೌಸ್ ನಲ್ಲಿ. ಜಿಲ್ಲೆಯ ಪದಾಧಿಕಾರಿಗಳ. ಹಾಗೂ ತಾಲೂಕುಗಳ ಅಧ್ಯಕ್ಷರ. ತಾಲೂಕ ಪದಾಧಿಕಾರಿಗಳ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ಜಿಲ್ಲಾಧ್ಯಕ್ಷ. ಗಂಗಣ್ಣ ಡಿಶ್. ರಾಜ್ಯ ಅಧ್ಯಕ್ಷರಾದ ಶ್ರೀ ನಿಂಗರಾಜ್ ಗೌಡ್ರು ಇವರ ಹುಟ್ಟು ಹಬ್ಬವನ್ನು ದಿನಾಂಕ 1 ಜೂನ್ 2026 ರಂದು

ಬೆಂಗಳೂರಿನಲ್ಲಿ ಅದ್ದೂರಿಯಾಗಿ ಜನ್ಮದಿನದ ಸಂಭ್ರಮ ಆಚರಣೆ ಹಾಗೂ ಸರಕಾರಿ ಕನ್ನಡ ಶಾಲೆಗಳನ್ನು ಉಳಿಸಿ ಅಭಿಯಾನ ಕಾರ್ಯಕ್ರಮದ ಕುರಿತು ಸಭೆಯಲ್ಲಿ ವಿವರಿಸಿದರು. ಮತ್ತು ಇದೇ ಸಂದರ್ಭದಲ್ಲಿ. ಕ.ರ.ವೇ ಸ್ವಾಭಿಮಾನಿ ಸೇನೆಯ ರಾಯಚೂರು ತಾಲೂಕ ಅಧ್ಯಕ್ಷರನ್ನಾಗಿ. ಅವಿನಾಶ್ ಸಿಯಾತಲಾಬ್. ಹಾಗೂ ಜಿಲ್ಲಾ ಕಾರ್ಯಾಧ್ಯಕ್ಷರನ್ನಾಗಿ. ಶೇಕ್ ದಾದಾ ಇವರನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಕರವೇ ಸ್ವಾಭಿಮಾನಿ ಸೇನೆಯ ತತ್ವ ಸಿದ್ಧಾಂತವನ್ನು ಮೆಚ್ಚಿ ಹಲವಾರು ಯುವಕರು ಕರವೇ ಸ್ವಾಭಿಮಾನಿ ಸೇನೆಗೆ ಸೇರ್ಪಡೆಯಾದರು. ಈ ಕಾರ್ಯಕ್ರಮದಲ್ಲಿ. ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ. ರಾಮಕೃಷ್ಣ

3ನೇ ಪುಟ.....

ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ತಾಂತ್ರಿಕ ತೊಡಕಗಳು ಅಡ್ಡಿಯಾಗದಿರಲಿ



ಕೊಪ್ಪಳ ,ಮೇ.30-

ರಾಜ್ಯ ಸರ್ಕಾರವು ಜಾರಿ ಮಾಡಿದ ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿಧಿ ಪಂಚ ಗ್ಯಾರಂಟಿ ಯೋಜನೆಗಳು ಜಿಲ್ಲೆಯಲ್ಲಿ ಅತ್ಯುತ್ತಮವಾಗಿ ಅನುಷ್ಠಾನ ವಾಗುತ್ತಿವೆ. ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಕೆಲವೊಂದು ತಾಂತ್ರಿಕ ತೊಡಕುಗಳನ್ನು ಪೂರ್ಣ ಪ್ರಮಾಣದಲ್ಲಿ ಸರಿಪಡಿಸುವ ಪ್ರಯತ್ನದ ಭಾಗವಾಗಿ ಆಯಾ ಯೋಜನೆಗಳ ಅನುಷ್ಠಾನಾಧಿಕಾರಿಗಳು ಪಂಚಾಯತಿವಾರು ಪ್ರಗತಿ ಪರಿಶೀಲನಾ ಸಭೆ ನಡೆಸಿ, ಆಯಾ ಯೋಜನೆಗಳ ಫಲಾನುಭವಿಗಳ ಬಳಿ ಮುಕ್ತವಾಗಿ ಮಾತನಾಡಬೇಕು. ಫಲಾನುಭವಿಗಳು ಹೇಳುವ ತಾಂತ್ರಿಕ ತೊಂದರೆಗಳ ಇತ್ಯರ್ಥಕ್ಕೆ ಹೆಚ್ಚಿನ ಗಮನ ಕೊಡಬೇಕು ಎಂದು ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಅವರು ಹೇಳಿದರು.

ಕೊಪ್ಪಳ ಜಿಲ್ಲಾ ಪಂಚಾಯತ್‌ನ ಸಮಿತಿ ಸಭಾಂಗಣದಲ್ಲಿ ಮೇ 29ರಂದು ನಡೆದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೇಷನ್ ಅಥವಾ ಆಧಾರ್ ಕಾರ್ಡನಲ್ಲಿ ಹೆಸರುಗಳಲ್ಲಿನ ವ್ಯಾತ್ಯಾಸದಂತಹ ತಾಂತ್ರಿಕ ಕಾರಣಗಳಿಂದಾಗಿ ಕೆಲ ಫಲಾನುಭವಿಗಳಿಗೆ ಸಕಾಲಕ್ಕೆ ಅವರ ಖಾತೆಗೆ ಹಣ ಜಮೆ ಆಗುವುದಿಲ್ಲ. ವಿದ್ಯುತ್ ಬಿಲ್ ಕಟ್ಟಿದ್ದರು ಸಹ ಬಿಲ್ ಬಾಕಿ ತೋರಿಸುವಂತಹ ವಿದ್ಯುತ್ ಮೀಟರ್ ಬಗೆಗಿನ ತಾಂತ್ರಿಕ ತೊಂದರೆ ಇತ್ಯರ್ಥವಾಗಬೇಕು. ನ್ಯಾಯಬೆಲೆ ಅಂಗಡಿಗಳಿಗೆ ಸರಿಯಾದ ಸಮಯಕ್ಕೆ ಅಕ್ಕಿ ತಲುಪುವಂತೆ ನೋಡಿಕೊಳ್ಳಬೇಕು. ಎಲ್ಲ ಕಾರ್ಡುದಾರರ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಕಾರ್ಡ್ ಲಿಂಕ್ ಆಗುವುದಕ್ಕೆ ಮೊದಲಾದ್ಯತೆ ನೀಡಬೇಕು ಎಂದು ಆಯಾ ಯೋಜನೆಗಳ ಅನುಷ್ಠಾನಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೊಪ್ಪಳ, ಕುಷ್ಟಗಿ, ಗಂಗಾವತಿ, ಕಾರಟಗಿ, ಕನಕಗಿರಿ, ಯಲಬುರ್ಗಾ, ಕುಕನೂರ ಸೇರಿದಂತೆ ಜಿಲ್ಲೆಯ ಎಲ್ಲ ಕಡೆಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಉತ್ತಮವಾಗಿ ಅನುಷ್ಠಾನವಾಗುತ್ತಿವೆ. ಶಕ್ತಿ ಯೋಜನೆ ಅನುಷ್ಠಾನವು ಜಾಗತಿಕ ದಾಖಲೆ ಬರೆದಿದೆ. ರಾಜ್ಯದಲ್ಲಿ ಶಕ್ತಿ ಯೋಜನೆಯಡಿ ಮೇ 19ರವರೆಗೆ ದಾಖಲೆಯ 726 ಕೋಟಿ ಪ್ರಮಾಣದಲ್ಲಿ ಮಹಿಳೆಯರು ಪ್ರಯಾಣಿಸಿ ಸಾರಿಗೆ ನಿಗಮವು 18,943 ಕೋಟಿ ಆದಾಯ ಗಟ್ಟಿಸಿದೆ. ಕೊಪ್ಪಳ ಜಿಲ್ಲೆಯಲ್ಲಿ ಇದುವರೆಗೆ 11.59 ಕೋಟಿ ಪ್ರಮಾಣದಲ್ಲಿ ಮಹಿಳೆಯರು ಪ್ರಯಾಣಿಸಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕೊಪ್ಪಳ ವಿಭಾಗದ ಆದಾಯ 431 ಕೋಟಿ ರೂ.ಗೆ ಹೆಚ್ಚಿದೆ. ರಾಜ್ಯ ಸರ್ಕಾರದ ಯೋಜನೆಗಳ ಜನಪ್ರಿಯತೆಗೆ ಇದು ಸಾಕ್ಷಿಯಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ನೋಂದಾಯಿಸಿಕೊಡ 3,07,972 ಗೃಹಲಕ್ಷ್ಮಿ ಫಲಾನುಭವಿಗಳಿಗೆ ಇದುವರೆಗೆ 1791 ಕೋಟಿ ರೂ. ವ್ಯಯಿಸಲಾಗಿದೆ. ಆಗಸ್ಟ್ 2023ರಿಂದ ಏಪ್ರೀಲ್ 2025ರವರೆಗೆ ಜಿಲ್ಲೆಯಲ್ಲಿನ ಅರ್ಹ 2,89,369 ಗೃಹ ಜ್ಯೋತಿ ಫಲಾನುಭವಿಗಳಿಗೆ 402 ಕೋಟಿ ರೂ ಸಬ್ಸಿಡಿ ನೀಡಲಾಗಿದೆ. ಅದೇ ರೀತಿ ಜಿಲ್ಲೆಯಲ್ಲಿನ ಯುವನಿಧಿ ಯೋಜನೆಯ 14,404 ಫಲಾನುಭವಿಗಳಿಗೆ ಜನವರಿ 26ರವರೆಗೆ 30.32 ಕೋಟಿ ರೂ.ವೆಚ್ಚ ಮಾಡಲಾಗಿದೆ. 2026 ಮೇ ಮತ್ತು ಜೂನ್ ಮಾಹೆಯಲ್ಲಿ ಜಿಲ್ಲೆಯಲ್ಲಿನ ಅನ್ನಭಾಗ್ಯ ಯೋಜನೆಯ 3,63,504 ಫಲಾನುಭವಿಗಳಿಗೆ 13.89 ಕೋಟಿ ರೂ ಪಾವತಿಸಲಾಗಿದೆ. ಇಂತಹ ಸಾಧನೆಗಳ ಬಗ್ಗೆ ಜನತೆಗೆ ತಿಳಿಸಬೇಕು. ಅರ್ಹ ಎಲ್ಲ ಫಲಾನುಭವಿಗಳು ಯೋಜನೆಯ ವ್ಯಾಪ್ತಿಯೊಳಗಡೆ ಬರಲು ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಕೊಪ್ಪಳ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ ಅವರು ಮಾತನಾಡಿ ಸಭೆಗೆ ಅನೇಕ ಸಲಹೆ ಸೂಚನೆಗಳನ್ನು ನೀಡಿದರು. ಜೂನ್ 9 ರಂದು ಶಕ್ತಿ ಯೋಜನೆ ಆರಂಭವಾಗಿ ಮೂರು ವರ್ಷ ಆಗತ್ತಿದ್ದು ಅಂದು ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ಸಾಧನಾ ಕಾರ್ಯಕ್ರಮ ಮಾಡಬೇಕು. ಅಂಗನವಾಡಿ ಕಾರ್ಯಕರ್ತರು ಮತ್ತು ವಿದ್ಯುತ್ ಮೀಟರ್ ರೀಡರ್ ಅವರ ಸಹಕಾರದೊಂದಿಗೆ ಗೃಹಲಕ್ಷ್ಮೀ ಫಲಾನುಭವಿಗಳ ನಿಖರ ಮಾಹಿತಿ ಸಂಗ್ರಹಣೆ ಕೆಲಸ ಮಾಡಬೇಕು. ಅನ್ನಭಾಗ್ಯ ಯೋಜನೆಗೆ ಇನ್ನಷ್ಟು ಸುಧಾರಿತ ವ್ಯವಸ್ಥೆ ಜಾರಿ ಮಾಡಬೇಕು. ಗ್ಯಾರಂಟಿ ಯೋಜನೆಗಳ ಮೂಲಕ ಸಾಕಷ್ಟು ಜನರ ಜೀವನೋಪಾಯ ಸುಗಮ ಮಾಡುವ ಜೊತೆಗೆ ಜನರ ತಲಾ ಆದಾಯ ಹೆಚ್ಚಳ ಮಾಡಿದ ಶ್ರೇಯಸ್ಸು ರಾಜ್ಯ ಸರ್ಕಾರಕ್ಕೆ ಸಲ್ಲುತ್ತಿದ್ದು, ಈ ಬಗ್ಗೆ ಜನರಿಗೆ ತಿಳಿಸುವ ಕಾರ್ಯವನ್ನು ಎಲ್ಲಾ ಸಂಬಧಿಸಿದ ಇಲಾಖೆಗಳು ಮಾಡಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಬಿ.ಖಾದ್ರಿ, ಅಮರೇಶಪ್ಪ, ನಾಗರಾಜ ಅರಳಿ, ಸದಸ್ಯರಾದ ಶಾರದಾ ಕಟ್ಟಿಮನಿ, ಹಜರತ್ ಹುಸೇನ್, ಆನಂದ ಹಾಸಲಕರ, ದೇವಪ್ಪ ಭಾವಿಕಟ್ಟಿ ಸೇರಿದಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರು ಹಾಗೂ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಟಿ.ಕೃಷ್ಣಮೂರ್ತಿ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಖಾಸಗಿ ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿ ಖಂಡಿಸಿ ಬೃಹತ್ ಪ್ರತಿಭಟನೆ

ಕೊಟ್ಟೂರು,,ಮೇ.30-

ಪಟ್ಟಣದ ಖಾಸಗಿ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳು ಶಿಕ್ಷಣವನ್ನು ವ್ಯಾಪಾರವನ್ನಾಗಿ ಮಾಡಿಕೊಂಡು ತಮಗೆ ಇಷ್ಟ ಬಂದಂತೆ ಡೊನೇಷನ್ ಪಡೆದುಕೊಂಡು ಸರಕಾರದ ನಿಯಮಗಳನ್ನು ಗಾಳಿಗೆ ತೂರಿದ್ದಾರೆ ಎಂದು ರಾಜ್ಯ ರೈತ ಸಂಘದ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಗುಡಿಯರ್ ಮಲ್ಲಿಕಾರ್ಜುನ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಬಸ್ ನಿಲ್ದಾಣದ ವೃತ್ತದಲ್ಲಿ ಬುಧವಾರ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿ ನಿಯಂತ್ರಿಸುವಂತೆ ತಹಶೀಲ್ದಾರ್ ಜಿ.ಕೆ.ಅಮರೀಶ್ ಇವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಗುಡಿಯರ್ ಮಲ್ಲಿಕಾರ್ಜುನ್, ಇದರಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಹ ಭಾಗಿಯಾಗಿರುವುದು ಶೋಚನೀಯ ಸಂಗತಿಯಾಗಿದ್ದು ಪ್ರಸ್ತುತ ದಿನದಲ್ಲಿ ಶಿಕ್ಷಣ ಕ್ಷೇತ್ರ ಉಳ್ಳವರ ಪಾಲಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು.

ಅಂಬೇಡ್ಕರ್ ಸಂಘದ ತಾಲೂಕು ಘಟಕದ ಅಧ್ಯಕ್ಷ ಬದ್ದಿ ದುರುಗೇಶ್ ಮಾತನಾಡಿ, ಶ್ರೀಮಂತರ ಮಕ್ಕಳು ಮಾತ್ರ ಉನ್ನತ ಶಿಕ್ಷಣವನ್ನು ಪಡೆಯುವ ಸ್ಥಿತಿ ಇಂದು ನಿರ್ಮಾಣವಾಗಿರುವುದು ಉತ್ತಮ ಬೆಳವಣಿಗೆಯಲ್ಲ ಎಂದರು.

ವಕೀಲ ಹನುಮಂತಪ್ಪ, ಬದ್ದಿ ಮರಿಸ್ವಾಮಿ, ಅಲಬೂರು ಮಂಜುನಾಥ್, ರೈತ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಎನ್. ಭರಮಣ್ಣ ಮಾತನಾಡಿದರು.

ಈ ಸಂದರ್ಭದಲ್ಲಿ ಡಿಎಸ್ ಎಸ್ ತಾಲೂಕು ಘಟಕದ ಅಧ್ಯಕ್ಷ ಪಿ.ಚಂದ್ರಶೇಖರ ಎಲ್ ಕುಬೇರಪ್ಪ, ದೊಡ್ಡಬಸಪ್ಪ, ಎಲ್.ವಿಷ್ಣು, ಟಿ.ಸೋಮಶೇಖರ ವಕೀಲ ಶಿವರಾಜ್, ಕೊಲ್ಲಪ್ಪ, ಕೆಂಚಪ್ಪ ಮುಂತಾದವರು ಪಾಲ್ಗೊಂಡಿದ್ದರು.

ಪಿಣರಾಯಿ ವಿಜಯನ್ ನಿವಾಸದ ಮೇಲಿನ ಈಡಿ ದಾಳಿಯನ್ನು ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ



ಕಲಬುರಗಿ,ಮೇ.30-

ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಈಡಿ) ದಾಳಿ ನಡೆಸಿರುವುದನ್ನು ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಜಿಲ್ಲಾ ಸಮಿತಿ ವತಿಯಿಂದ ಕಲಬುರಗಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಕೆ. ನೀಲಾ, ''ಕೇರಳದ ಮಾಜಿ ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ಅವರ ನಿವಾಸದ ಮೇಲಿನ ದಾಳಿಯು ರಾಜಕೀಯ ಸೇಡು ತೀರಿಸಿಕೊಳ್ಳುವ ಕ್ರಮವಾಗಿದೆ. ಬಿಜೆಪಿ ಸರ್ಕಾರ ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಂಡು ಈಡಿ ಸೇರಿದಂತೆ ಕೇಂದ್ರ ತನಿಖಾ ಸಂಸ್ಥೆಗಳನ್ನು ರಾಜಕೀಯ ಅಸ್ತ್ರಗಳಾಗಿ ಬಳಸುತ್ತಿದೆ'' ಎಂದು ಆರೋಪಿಸಿದರು.

''ಪ್ರತಿಭಟನೆ ನಡೆಸುತ್ತಿದ್ದ ಹಿರಿಯ ನಾಯಕರು ಸೇರಿದಂತೆ ಹಲವರನ್ನು ದಿಲ್ಲಿ ಪೊಲೀಸರು ಬಲವಂತವಾಗಿ ಬಂಧಿಸಿರುವುದು ಖಂಡನೀಯ. ಹಿರಿಯ ನಾಯಕಿ ಬೃಂದಾ ಕಾರಟ್,

ಪೊಲಿಟ್ ಬ್ಯೂ ರೋ ಸದಸ್ಯರಾದ ಅಶೋಕ್ ಧವಳೆ, ಮರಿಯಮ್ ಧವಳೆ ಸೇರಿದಂತೆ ಅನೇಕ ನಾಯಕರ ಬಂಧನವು ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಯಾಗಿದೆ'' ಎಂದು ಹೇಳಿದರು.

ಪಿಣರಾಯಿ ವಿಜಯನ್ ಅವರಿಗೆ ಎಕ್ಸ ಲಾಜಿಕ್ ಪ್ರಕರಣದೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ನ್ಯಾಯಾಲಯಗಳು ಪದೇಪದೇ ಗಮನಿಸಿದ್ದರೂ, ರಾಜಕೀಯ ಉದ್ದೇಶದಿಂದ ಅವರನ್ನು ನಿರಂತರವಾಗಿ ಗುರಿಯಾಗಿಸಲಾಗುತ್ತಿದೆ ಎಂದು ಅವರು ದೂರಿದರು.

ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಈಡಿ ಕ್ರಮ ಕೈಗೊಳ್ಳುತ್ತಿರುವುದು ಕೋಮುವಾದಿ-ಕಾರ್ಪೊರೇಟ್ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ಹೋರಾಟದ ಐಕ್ಯತೆಗೆ ಧಕ್ಕೆ ತರುವಂತಿದೆ ಎಂದು ಆರೋಪಿಸಿದ ಅವರು, ''ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಒಳಒಪ್ಪಂದ ಇರುವ ಶಂಕೆ ಮೂಡುತ್ತಿದೆ'' ಎಂದು ಟೀಕಿಸಿದರು.

ಪಕ್ಷವು ಯಾವುದೇ ತನಿಖಾ ಪ್ರಕ್ರಿಯೆಗೆ ವಿರೋಧಿಯಲ್ಲ. ಆದರೆ, ಕೇಂದ್ರೀಯ ತನಿಖಾ ಸಂಸ್ಥೆಗಳ ರಾಜಕೀಯ ದುರುಪಯೋಗವನ್ನು ಒಪ್ಪಲಾಗುವುದಿಲ್ಲ. ವಿರೋಧ ಪಕ್ಷಗಳ ನಾಯಕರ ಮೇಲಿನ ದಾಳಿ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳ ಹರಣದ ವಿರುದ್ಧ ದೇಶಾದ್ಯಂತ ಬಲವಾದ ಹೋರಾಟಗಳನ್ನು ಸಂಘಟಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಭೀಮಶೆಟ್ಟಿ ಯಂಪಳ್ಳಿ, ಸುಧಾಮ ಧನ್ನಿ, ಶ್ರೀಮಂತ ಬಿರಾದಾರ, ಶಾಂತಾ ಘಂಟಿ, ಲವಿತ್ರ ವಸ್ತ್ರದ, ಪದ್ಮಿನಿ ಕಿರಣಗಿ, ಪ್ರಭು ಪ್ಯಾರಾಬುದ್ದಿ, ಚಂದಮ್ಮ, ಗುರು ಚಾಂದಕವಠೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಿಎಂ ಬದಲಾದರೂ ವ್ಯವಸ್ಥೆ ಬದಲಾಗುವುದಿಲ್ಲ: ಕಾಂಗ್ರೆಸ್ ವಿರುದ್ಧ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ



ಕಲಬುರಗಿ,ಮೇ.30-

ಸಿಎಂ ಸ್ಥಾನದಲ್ಲಿದ್ದ ವ್ಯಕ್ತಿ ಬದಲಾಗಬಹುದು, ಆದರೆ ವ್ಯವಸ್ಥೆ ಬದಲಾಗುವುದಿಲ್ಲ ಎಂದು ಕಾಂಗ್ರೆಸ್ ವಿರುದ್ಧ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಾಗ್ದಾಳಿ ನಡೆಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದೇ ತಿಂಗಳಲ್ಲಿ ನಾಲ್ವರು ಹಿಂದೂ ವಿರೋಧಿ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಂಡಿದ್ದಾರೆ ಎಂದು ಹೇಳಿದರು.

''ಕೋಮುವಾದಿಗಳ ವಿರುದ್ಧ ಹೋರಾಟ ಮಾಡುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ನಿಜವಾದ ಕೋಮುವಾದಿಗಳು ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ಅವರೇ'' ಆಗಿದ್ದಾರೆ ಎಂದು ಆರೋಪಿಸಿದರು.

ಕಾಂತಾರಾಜ ವರದಿಯಲ್ಲಿ ದಲಿತ ಸಮುದಾಯ ಮೊದಲ ಸ್ಥಾನದಲ್ಲಿತ್ತು. ಆದರೆ ಪ್ರಸ್ತುತ ವರದಿಯಲ್ಲಿ ಮುಸ್ಲಿಂ ಸಮುದಾಯ ಮೊದಲ ಸ್ಥಾನಕ್ಕೆ ಬಂದಿದೆ ಎಂದು ಹೇಳಿದ ಅವರು, ''ಜಾತಿ-ಜಾತಿಗಳ ಮಧ್ಯೆ ಸಂಘರ್ಷ ಸೃಷ್ಟಿಸಿರುವುದು ಸಿದ್ದರಾಮಯ್ಯ ಸರ್ಕಾರ'' ಎಂದು ಟೀಕಿಸಿದರು.

''ಒಮ್ಮೆ ನಂಬರ್ ಒನ್ ಸ್ಥಾನದಲ್ಲಿದ್ದ ದಲಿತರು ಇಂದು ಲೆಕ್ಕಕ್ಕಿಲ್ಲದಂತಾಗಿದ್ದಾರೆ'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಧಾನಮಂತ್ರಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡುವುದನ್ನು ಸಿದ್ದರಾಮಯ್ಯ ಬಿಡಲಿಲ್ಲ ಎಂದು ಆರೋಪಿಸಿದ ಅವರು, ''ಪ್ರಧಾನ ಮಂತ್ರಿ ಯವರೂ ಅಹಿಂದ ವರ್ಗಕ್ಕೇ ಸೇರಿದವರು. ಅಧಿಕಾರದ ಮದದಲ್ಲಿ ಇತರ ನಾಯಕರ ಬಗ್ಗೆ ತುಚ್ಛವಾಗಿ ಮಾತನಾಡುವುದು ಸರಿಯಲ್ಲ'' ಎಂದರು.

ರಾಜ್ಯದಲ್ಲಿ ಇಂತಹ ಆಡಳಿತ ಅಂತ್ಯವಾಗಬೇಕೆಂದು ಜನರು ನಿರೀಕ್ಷೆ ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಸಾಮರಸ್ಯ ಕಾಪಾಡುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ ಎಂದು ಅವರು ದೂರಿದರು.


ಇಂಧನ ದರ ಏರಿಕೆ ಕುರಿತು ಮಾತನಾಡಿದ ಅವರು, ''ತೈಲ ಬೆಲೆ ಏರಿಕೆ ಮಾಡಿರುವುದು ಆಯಿಲ್ ಕಂಪನಿಗಳು. ನಷ್ಟ ತಪ್ಪಿಸಿಕೊಳ್ಳಲು ಕಂಪೆನಿಗಳು ದರ ಹೆಚ್ಚಿಸಿವೆ. ಇದಕ್ಕೂ ಸರಕಾರಕ್ಕೂ ಯಾವುದೇ ಸಂಬಂಧ ಇಲ್ಲ'' ಎಂದು ಹೇಳಿದರು.

''ಅಧಿಕಾರ ಹಸ್ತಾಂತರದಿಂದ ಭ್ರಷ್ಟಾಚಾರ ಕಡಿಮೆಯಾಗುವುದಿಲ್ಲ. ಬದಲಾಗಿ ಇನ್ನಷ್ಟು ಹೆಚ್ಚಾಗುತ್ತದೆ'' ಎಂದು ಟೀಕಿಸಿದ ಅವರು, ''ಈ ಸರ್ಕಾರವನ್ನು ಕಿತ್ತೆಸೆಯಲು ಜನರು ಸಜ್ಜಾಗಬೇಕು'' ಎಂದು ಕರೆ ನೀಡಿದರು. ಶಾಲಾ-ಕಾಲೇಜುಗಳಲ್ಲಿ ಒಂದೇ ರೀತಿಯ ಯೂನಿಫಾರ್ಮ್ ಇರಬೇಕೆಂದು ಹೇಳಿದ ಅವರು, ''ಆ ಕಾರಣಕ್ಕಾಗಿಯೇ ಬಿಜೆಪಿ ಸರಕಾರ ಹಿಜಾಬ್ ನಿಷೇಧ ಮಾಡಿತ್ತು. ಆದರೆ ಕಾಂಗ್ರೆಸ್ ಸರಕಾರ ಓಲೈಕೆ ರಾಜಕಾರಣಕ್ಕಾಗಿ ಮತ್ತೆ ಹಿಜಾಬ್‌ಗೆ ಅವಕಾಶ ನೀಡಿದೆ'' ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಎಂಎಲ್ಸಿ ಬಿ.ಜಿ ಪಾಟೀಲ್, ಮಾಜಿ ಸಂಸದ ಉಮೇಶ್ ಜಾಧವ್, ರಾಜಕುಮಾರ್ ಪಾಟೀಲ್ ತೆಲ್ಕೂರ, ದತ್ತಾತ್ರೇಯ ಪಾಟೀಲ್ ರೇವೂರ, ಶಿವರಾಜ್ ಪಾಟೀಲ್ ರದ್ದೇವಾಡಗಿ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು.

2026-27ನೇ ಸಾಲಿನ ಪ್ರಥಮ ತ್ರೈಮಾಸಿಕ ಕೆಡಿಪಿ ಸಭೆ

ಮಳೆಗಾಲದಲ್ಲಿ ಪ್ರಾಣಹಾನಿ ತಡೆಗೆ ಮುನ್ನಚ್ಚರಿಕೆ ವಹಿಸಲು ಶಾಸಕರ ಸೂಚನೆ



ಕೊಪ್ಪಳ ,ಮೇ.30-

ಮಳೆಗಾಲದ ವೇಳೆಯಲ್ಲಿ ಜನ-ಜಾನುವಾರುಗಳ ಪ್ರಾಣ ಹಾನಿ ತಡೆಗೆ ಹಾಗೂ ಹಾನಿಗೆ ತಕ್ಕಂತೆ ಪರಿಹಾರ ಒದಗಿಸುವುದಕ್ಕೆ ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ವಹಿಸಬೇಕು ಎಂದು ಶಾಸಕರಾದ ಗಾಲಿ ಜನಾರ್ಧನ ರೆಡ್ಡಿ ಅವರು ಸಂಬಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾ ಪಂಚಾಯತ್ ಕಚೇರಿಯ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಮೇ 29ರಂದು ಇರಕಲಗಡ ಹೋಬಳಿಗೆ ಸಂಬಧಿಸಿದತೆ ತ್ರೈಮಾಸಿಕ ಕೆಡಿಪಿ ಸಭೆ ನಡೆಸಿ ಅವರು ಮಾತನಾಡಿದರು.

ಮಳೆಗಾಲದ ಸಂದರ್ಭದಲ್ಲಿ ಅಧಿಕಾರಿಗಳು ಜಾಗ್ರತೆಯಿಂದ ಕಾರ್ಯ ನಿರ್ವಹಿಸಬೇಕು. ಯಾವುದೆ ಕಡೆಗಳಲ್ಲಿ ಹಾನಿ ಸಂಭವಿಸಿದಾಗ ಸ್ಥಳಕ್ಕೆ ಕೂಡಲೇ ಭೇಟಿ ನೀಡಿ ಪರಿಶೀಲಿಸಬೇಕು. ಜೀವ ಹಾನಿ ಹಾಗೂ ಆಸ್ತಿಪಾಸ್ತಿ ಹಾನಿಗೆ ಪರಿಹಾರ ಕಾರ್ಯವನ್ನು ತ್ವರಿತಗೊಳಿಸಬೇಕು. ಸಾರ್ವಜನಿಕರ ದೂರವಾಣಿ ಕರೆಗಳನ್ನು ಸ್ವೀಕರಿಸಿ ಸ್ಪಂದನೆ ನೀಡಬೇಕು ಎಂದು ಶಾಸಕರು ಕಂದಾಯ, ಜೆಸ್ಕಾಂ, ಪಶುಪಾಲನೆ, ಕೃಷಿ, ತೋಗಾರಿಕಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಿನ್ನಾಳ ಗ್ರಾಮ ಸೇರಿದಂತೆ ಆರು ಕಡೆಗಳಲ್ಲಿನ ಸಾರ್ವಜನಿಕ ಶೌಚಾಲಯಗಳಿಗೆ ವಿದ್ಯುತ್ ಸಂಪರ್ಕವಿಲ್ಲದ ವಿಷಯ ಸಭೆಯಲ್ಲಿ ಚರ್ಚೆಗೆ ಬಂದಿತು.

ಹಿದುಳಿದ ಕಿನ್ನಾಳ ಪ್ರದೇಶದಲ್ಲಿನ ಸಾರ್ವಜನಿಕ ಶೌಚಾಲಯಕ್ಕೆ ವಿದ್ಯುತ್ ಸೌಕರ್ಯ ಕೊಡಲು ವಿಳಂಬ ವಹಿಸಿದ ಕೊಪ್ಪಳ ಜೆಸ್ಕಾಂ ಅಧಿಕಾರಿಗೆ ಶಾಸಕರು ತರಾಟೆ ತೆಗೆದುಕೊಂಡರು. ನಾಲ್ಕಾರು ಬಾರಿ ಗಂಗಾವತಿಗೆ ಅಲೆದು ಕಿನ್ನಾಳ ಗ್ರಾಮದ ಶೌಚಾಲಯಕ್ಕೆ ವಿದ್ಯುತ್ ಸೌಕರ್ಯ ಕಲ್ಪಿಸಿ ಎಂದು ಮನವಿ ಹಿಡಿದು ಬಂದ ಕಿನ್ನಾಳ ಗ್ರಾಮದ ಗ್ರಾಪಂ ಸದಸ್ಯೆ ಕಮಲಮ್ಮ ಅವರಲ್ಲಿನ ಮಾನವೀಯತೆ, ಕಾಳಜಿ ಭಾವನೆಯನ್ನು ಅಧಿಕಾರಿಗಳು ಸಹ ರೂಢಿಸಿಕೊಳ್ಳಬೇಕು ಎಂದು ಶಾಸಕರು ಎಲ್ಲ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಕಿನ್ನಾಳ ಸೇರಿದಂತೆ 6 ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆ ಕರೆದು ವಿದ್ಯುತ್ ಸಂಪರ್ಕ ಸೇರಿದಂತೆ ನಾನಾ ಕಾರ್ಯಗಳ ಬಗ್ಗೆ ಶಿಸ್ತುಬದ್ಧ ಕೆಲಸ ನಿರ್ವಹಿಸಲು ಸೂಚನೆ ನೀಡಿರಿ ಎಂದು ಶಾಸಕರು, ಕೊಪ್ಪಳ ತಾಲೂಕು ಪಂಚಾಯತ್ ಇಓ ಅವರಿಗೆ ನಿರ್ದೇಶನ ನೀಡಿದರು.

ಕಳೆದ ಕೆಡಿಪಿ ಸಭೆಯಲ್ಲಿ ನೀಡಿದ ಸೂಚನೆಯನ್ವಯ ಗಂಗಾವತಿ ಬಿಇಓ ಕಚೇರಿ ಚುರುಕಾಗಿ ಕಾರ್ಯ ನಿರ್ವಹಿಸಿ, ಎಲ್ಲ ಶಾಲೆಗಳ ಮುಖ್ಯಾಧ್ಯಾಪಕರ ಸಭೆ ನಡೆಸಿ ಸೂಚನೆ ನೀಡಿದ ಪರಿಣಾಮ ಗಂಗಾವತಿ ತಾಲೂಕಿನಲ್ಲಿ ಕಳೆದ ವರ್ಷ ಶೇ.65ರಷ್ಟಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶವು ಈ ಬಾರಿ 93.28ರಷ್ಟು ಪ್ರಗತಿಯಾಗಿದೆ. ಕಳೆದ ಸಭೆಯಲ್ಲಿ ನೀಡಿದ ಸೂಚನೆಯಂತೆ ಗಂಗಾವತಿ ತಾಲೂಕು ವ್ಯಾಪ್ತಿಯಲ್ಲಿ ಶಾಲಾ ಕೊಠಡಿಗಳ ದುರಸ್ತಿ ಸೇರಿದಂತೆ ನಾನಾ ಕಾರ್ಯಗಳಿಗೆ ಅಂದಾಜು 22 ಕೋಟಿ ರೂ.ಗಳ ಅಂದಾಜು ಪತ್ರಿಕೆ ಸಿದ್ಧಪಡಿಸಿ ಸಲ್ಲಿಸಲಾಗಿದೆ ಎಂದು ಗಂಗಾವತಿ ಬಿಇಓ ಅವರು ಸಭೆಗೆ ಮಾಹಿತಿ ನೀಡಿದರು. ಶಾಲಾ ಕೊಠಡಿಗಳ ನಿರ್ಮಾಣ ಸೇರಿದಂತೆ ನಾನಾ ಕಾರ್ಯಕ್ಕೆ ಗಂಗಾವತಿ ಕ್ಷೇತ್ರಕ್ಕೆ 80 ಕೋಟಿ ಅನುದಾನ ನಿಗದಿಯಾದ ಪೈಕಿ 40 ಕೋಟಿ ಅನುದಾನದಲ್ಲಿ ಈಗ ಕೆಲಸ ಆರಂಭಿಸಲಾಗುವುದು ಎಂದು ಶಾಸಕರು ತಿಳಿಸಿದರು. ಆನೆಗೊಂದಿ ಆಸ್ಪತ್ರೆಯಲ್ಲಿ ರಾತ್ರಿ ವೇಳೆ ವೈದ್ಯಾಧಿಕಾರಿಗಳು ಇರುವುದಿಲ್ಲ ಎಂಬ ವಿಷಯವು ಸಭೆಯಲ್ಲಿ ಪ್ರಸ್ತಾಪವಾಯಿತು. ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ವೈದ್ಯಾಧಿಕಾರಿಗಳಿಗೆ ಸರಿಯಾಗಿ ಕಾರ್ಯ ಹೊಂದಾಣಿಕೆ ಮಾಡುವಂತೆ ಪ್ರಸ್ತಾವನೆಯನ್ನು ಎಹೆಚ್‌ಓ ಅವರಿಗೆ ಸಲ್ಲಿಸಲಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಎಲ್ಲ ವಸತಿ ನಿಲಯಗಳಿಗೆ ನಿಯಮಿತ ಭೇಟಿ ನೀಡಿ, ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಪ್ರತಿ 2 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಕಾರ್ಯ ನಡೆಸುವಂತೆ ಶಾಸಕರು, ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಗಂಗಾವತಿ, ಕೊಪ್ಪಳ ತಾಲೂಕಿನ ತಹಸೀಲ್ದಾರರು ಮತ್ತು ಕಾರ್ಯ ನಿರ್ವಹಾಕ ಅಧಿಕಾರಿಗಳು ಇದ್ದರು.

ಯುವ ಪೀಳಿಗೆ ಮಹಾರಾಣಾ ಪ್ರತಾಪ್ ಅವರ ಆದರ್ಶವನ್ನು ಅಳವಡಿಸಿಕೊಳ್ಳಬೇಕು : ವಿಜಯಸಿಂಗ್



ಬೀದರ್ ,ಮೇ.30-

ಇಂದಿನ ಯುವ ಪೀಳಿಗೆಯು ದೇಶಪ್ರೇಮ, ಧೈರ್ಯ ಮತ್ತು ಸ್ವಾಭಿಮಾನದ ಸಂಕೇತವಾಗಿರುವ ಮಹಾರಾಣಾ ಪ್ರತಾಪ್ ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್ ತಿಳಿಸಿದರು.

ಹುಮನಾಬಾದ್ ತಾಲೂಕಿನ ವರವಟ್ಟಿ (ಕೆ) ಗ್ರಾಮದಲ್ಲಿ ಗುರುವಾರ ಸಾಯಂಕಾಲ ಮಹಾರಾಣಾ ಪ್ರತಾಪ್ ಸಿಂಗ್ ರಜಪೂತ್ ಟ್ರಸ್ಟ್ ವತಿಯಿಂದ ಆಯೋಜಿಸಿದ ಮಹಾರಾಣಾ ಪ್ರತಾಪ ಸಿಂಹ ಅವರ 486ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿನ ಯುವಜನತೆ ಸಣ್ಣಪುಟ್ಟ ಕಷ್ಟಗಳಿಗೂ ಧೃತಿಗೆಡುತ್ತಿದ್ದಾರೆ. ಆದರೆ, ಅರಮನೆಯ ವೈಭೋಗವನ್ನು ತೊರೆದು ದೇಶಕ್ಕಾಗಿ ಕಾಡಿನಲ್ಲಿ ಕಷ್ಟದ ಜೀವನ ನಡೆಸಿದ ಮಹಾರಾಣಾ ಪ್ರತಾಪ್ ಅವರ ಇತಿಹಾಸವನ್ನು ಓದಿ, ಸವಾಲುಗಳನ್ನು ಧೈರ್ಯದಿಂದ ಎದುರಿಸುವುದನ್ನು ಕಲಿಯಬೇಕಿದೆ ಎಂದರು.

ಹಲವು ವರ್ಷಗಳಿಂದ ವರವಟ್ಟಿ ಗ್ರಾಮದಲ್ಲಿ ಧೀರ ಪರಾಕ್ರಮಿ ಮಹಾರಾಣಾ ಪ್ರತಾಪ್ ಸಿಂಗ್ ಅವರ ಭವ್ಯ ಮೂರ್ತಿ (ಪುತ್ಥಳಿ) ನಿರ್ಮಾಣದ ಬೇಡಿಕೆ ಇದ್ದು, ಶೀಘ್ರದಲ್ಲೇ ತಮ್ಮ ಸ್ವಂತ ಖರ್ಚಿನಲ್ಲಿಯೇ ಮೂರ್ತಿಯನ್ನು ಸ್ಥಾಪಿಸುವುದಾಗಿ ಅವರು ಭರವಸೆ ನೀಡಿದರು.

ಶಾಸಕ ಡಾ.ಸಿದ್ದು ಪಾಟೀಲ್ ಅವರು ಮಾತನಾಡಿ, ಭಾರತದ ಇತಿಹಾಸದಲ್ಲಿ ಶೌರ್ಯ, ಸ್ವಾಭಿಮಾನ ಮತ್ತು ಅಚಲ ದೇಶಭಕ್ತಿಯ ಪ್ರತೀಕವಾಗಿ ಅಮರರಾದ ಮಹಾರಾಣ ಪ್ರತಾಪ್ ಸಿಂಹ ಅವರು ಅನ್ಯಾಯದ ವಿರುದ್ಧ ಹೋರಾಡಿದ ಮಹಾನ್ ವೀರ ಯೋಧರು. ಹಲ್ದಿಘಾಟಿ ಯುದ್ಧದಲ್ಲಿ ತೋರಿದ ಅವರ ಸಾಹಸ, ಸ್ವಾತಂತ್ರ್ಯದ ಮೇಲಿನ ಅಪಾರ ಪ್ರೀತಿ ಮತ್ತು ಆತ್ಮಗೌರವದ ಬದುಕು ಇತಿಹಾಸದ ಚಿನ್ನದ ಅಕ್ಷರಗಳಲ್ಲಿ ಬರೆಯಲ್ಪಟ್ಟಿದೆ. ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ಸ್ವಾಭಿಮಾನವನ್ನು ಎಂದಿಗೂ ಕಳೆದುಕೊಳ್ಳಬಾರದು ಎಂಬ ಸಂದೇಶವನ್ನು ಮಹಾರಾಣ ಪ್ರತಾಪ್ ಸಿಂಹ ಅವರ ಸಾರಿದ್ದು ಇಂದಿಗೂ ಜಗತ್ತಿನಲ್ಲಿ ಅವಿಸ್ಮರಣೀಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ವೀರುಸಿಂಗ್ ಠಾಕೂರ್ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡ ಈಶ್ವರ್ ಸಿಂಗ್ ಠಾಕೂರ ರಜಪೂತ ಸಮಾಜದ ಗ್ರಾಮಾಧ್ಯಕ್ಷ ಮಹಾದೇವ್ ಸಿಂಗ್, ಉಪಾಧ್ಯಕ್ಷ ಅಮರ್ ಸಿಂಗ್, ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಸಿಂಗ್ ಠಾಕೂರ ಯುವ ಮುಖಂಡ ಜಗಮೋಹನ್ ಸಿಂಗ್ ರಜಪೂತ್, ಅಶೀಷ್ ಹಜಾರೆ, ಮಹಿಳಾ ಘಟಕದ ತಾಲೂಕಾಧ್ಯಕ್ಷೆ ಕಲಾವತಿ ಠಾಕೂರ್ ಹಾಗೂ ಮಹಾದೇವ್ ಪ್ರಸಾದ್ ತಿವಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ರುದ್ರಪ್ಪ ಲಮಾಣಿ, ಬೋಸರಾಜ ಅವರಿಗೆ ಸಚಿವ ಸ್ಥಾನ ನೀಡಲು ಬಂಜಾರ್ ಸಂಘ ಒತ್ತಾಯ

ಕಾಂಗ್ರೆಸ್ ಹೈಕಮಾಂಡನಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪ್ರದಾನ ಕಾರ್ಯದರ್ಶಿ ಎನ್.ಶಿವಣ್ಣ ಪವಾ್ರ ಲಚ್ಚಪ್ಪ ನಾಯ್ಕ ಕೃಷ್ಣಪ್ಪ ಪವಾರ ಅಮರೇಶ ಪವಾರ ಮೌನೇಶ ಸಿರವಾರ, ಕೃಷ್ಣ ಮೂರ್ತಿ ಜಾದವ ಮಸ್ಕಿ, ಲಾಲಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮತದಾರರ ತೀವ್ರ ಪರಿಷ್ಕರಣೆ ಎಸ್‌ಐಆರ್ ವಿರೋಧಿಸಿ ಪ್ರತಿಭಟನಾ ಜಾಥಾ

ದೇಶದ ಜನರಿಗೆ ಅಪಮಾನ ಮಾಡು ತ್ತಿದೆ ಎಂದು ಕೇಂದ್ರ ನಡೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ದೇಶದಾದ್ಯಂತ 13 ರಾಜ್ಯಗಳಲ್ಲಿ ಎಸ್‌ಐರ್ಆ ಜಾರಿ ಮಾಡುತ್ತೇವೆ ಎಂದು ಘೋಷಿಸಿದ್ದಾರೆ. ಇದರ ಪರಿಣಾಮ 13 ರಾಜ್ಯಗಳಲ್ಲಿ 6.5 ಕೋಟಿ ಮತದಾರರ ಹಕ್ಕನ್ನು ಕಸಿದುಕೊಂಡು ಸಂವಿಧಾನಕ್ಕೆ ಧಕ್ಕೆ ತರಲು ಹೋರಟಿದ್ದಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಚಾಮರಾಸಮಾಲಿಪಾಟೀಲ್,ಶರಣಗೌಡ ಅಸಮುದ್ದಿನ್, ಜಾನ್ ವೇಸ್ಲಿ, ಶರಣಕುಮಾರ, ಈಜಿದ್ ಅಲಿ, ಬಸವರಾಜ, ಮಾರೆಪ್ಪ ಹರವಿ ಜನಾರ್ಧನ ಹಳ್ಳಿಬೆಂಚಿ ಸೇರಿದಂತೆ ಉಪಸ್ಥಿತರಿದ್ದರು.

ರೈತರಿಗೆ ಬಿತ್ತನೆಯ ಬೀಜ, ರಸಗೊಬ್ಬರ, ಡೀಸಲ್‌ನ್ನು ಸಮರ್ಪಕವಾಗಿ ಪೂರೈಸಲು ಒತ್ತಾಯ

ಲಿಂಗಸುಗೂರು ಮತ್ತು ಮಸ್ಕಿ ತಾಲೂಕಿನ ಹಳ್ಳಿಗಳಿಂದ ಟ್ರ್ಯಾಕ್ಟರ್‌ಗಳನ್ನು ಪಟ್ಟಣಕ್ಕೆ ತಂದು ಡಿಸೇಲ್ ತುಂಬಿಸಿಕೊಳ್ಳುವುದು ಕಷ್ಟಕರವಾಗಿದೆ. ಆದ್ದರಿಂದ ರೈತರು ಕ್ಯಾನ್ ತಂದರೆ ಕನಿಷ್ಠ 50 ಲೀಟರ್ ಡಿಸೇಲ್ ನೀಡುವಂತೆ ಪೆಟ್ರೋಲ್ ಬಂಕ್ ಮಾಲೀಕರಿಗೆ ಸೂಚನೆ ನೀಡಬೇಕು ಎಂದರು.

ರಸಗೊಬ್ಬರ ಚೀಲಗಳ ತೂಕದಲ್ಲಿ ವ್ಯತ್ಯಾಸ ಕಂಡು ಬರುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ಬೀಜ ಮತ್ತು ರಸಗೊಬ್ಬರ ಮಾರಾಟ ಏಜೆನ್ಸಿ ಗಳ ಮೇಲೆ ಪರಿಶೀಲನೆ ನಡೆಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ರೈತ ಸಂಪರ್ಕ ಕೇಂದ್ರಗಳಲ್ಲಿ ಇನ್ನೂ ಬಿತ್ತನೆ ಬೀಜಗಳು ಲಭ್ಯವಾಗದಿರುವುದರಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ. ಸೂರ್ಯಕಾಂತಿ, ಹತ್ತಿ ಹಾಗೂ ತೊಗರಿ ಬೀಜಗಳ ದರ ಏರಿಕೆಯಾಗಿರುವುದನ್ನೂ ಮನವಿಯಲ್ಲಿ ಪ್ರಸ್ತಾಪಿಸಲಾಗಿದ್ದು, ಕೃಷಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ ರಸಗೊಬ್ಬರದ ಕೊರತೆಯಾಗದಂತೆ ನೋಡಿಕೊಳ್ಳಬೇಕು ಹಾಗೂ ಎಫ್‌ಡಿಐ ಕಡ್ಡಾಯ ಮಾಡಬಾರದು, ರೈತರ ಹೊಲಗಳಿಗೆ ಸಮರ್ಪಕವಾಗಿ 7 ಗಂಟೆಗಳ ವಿದ್ಯುತ್ ಸರಬರಾಜು, ವಿದ್ಯುತ್ ಸಮಸ್ಯೆ ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು.

2025ನೇ ಸಾಲಿನ ಬೆಳೆ ವಿಮೆ ಹಾಗೂ ಬೆಳೆ ಪರಿಹಾರ ವಿತರಣೆಯಲ್ಲಿ ಅನೇಕ ರೈತರಿಗೆ ಸಮರ್ಪಕ ಮಾಹಿತಿ ಸಿಕ್ಕಿಲ್ಲ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಮಾಹಿತಿ ನೀಡುವ ಮೂಲಕ ರೈತರಿಗೆ ನ್ಯಾಯ ದೊರಕುವಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ರೈತಸಂಘದ ಜಿಲ್ಲಾಧ್ಯಕ್ಷ ಶಿವಪುತ್ರಪ್ಪ ನಂದಿಹಾಳ, ಈರಣ್ಣ ಗುಡಿಹಾಳ, ಬಸನಗೌಡ, ನಾಗರಾಜ ಗುಡಿಹಾಳ, ಗದ್ದೆಪ್ಪ, ಬಸಪ್ಪ, ಬುಳ್ಳಪ್ಪ, ಹನುಮನೌಡ, ದುರಗಪ್ಪ, ಹನುಮಂತ ಶಿಲಹಳ್ಳಿ, ರಾಘವೇಂದ್ರ, ದುರಗಪ್ಪ ಶಿಲಹಳ್ಳಿ ಸೇರಿದಂತೆ ಇದ್ದರು.

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ಪದಾಧಿಕಾರಿಗಳ ಸಭೆ

ಭಜಂತ್ರಿ. ಜಿಲ್ಲಾ ಉಪಾಧ್ಯಕ್ಷರಾದ ಅಜ್ಮೀರ್ ಸಾಬ್. ಜಿಲ್ಲಾ ಸಂಚಾಲಕ ಹುಸೇನ್ ಭಾಷಾ ಇಂದಿರಾನಗರ. ಲಿಂಗಸಗೂರು ತಾಲೂಕ ಅಧ್ಯಕ್ಷರಾದ.ಜಿಲಾನಿ ಪಾಷ. ಮಸ್ಕಿ ತಾಲೂಕ ಅಧ್ಯಕ್ಷರಾದ. ಅಮರೇಶ್ ಉಸ್ಕಿಹಾಳ. ಕರವೇ. ಮುದುಗಲ್ ಮುಖಂಡರಾದ. ಎಸ.ಎ. ನಯಿಮ ಪಾಷ. ನಿಂಗಪ್ಪ ಜಂಗಮರಹಟ್ಟಿ. ಎಸ್ ಎಸ್ ಪಾಷಾ. ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಯಮನಮ್ಮ. ಹಾಗೂ ಜಿಲ್ಲಾ ಮತ್ತು ತಾಲೂಕ ಮಟ್ಟದ ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು

ಆಕಸ್ಮಿಕ ವಿದ್ಯುತ್ ತಗುಲಿ 20 ವರ್ಷದ ಯುವಕ ಸಾವು

ಈಚೆ ಬರಬೇಡಿ ಇಲ್ಲಿ ಕರೆಂಟ್ ರಾಂಗ್ ಕಲೆಕ್ಷನ ಆಗಿ ಕರೆಂಟ್ ವೈರಗಳಿಗೆ ಬೆಂಕಿ ತಗುಲಿರುವ ಹಾಗೆ ಆಗಿರುವುದರಿಂದ ನೀವು ಯಾರೂ ನನ್ನನ್ನು ಮುಟ್ಟಬೇಡಿ ಎನ್ನುತ್ತಾ ಅಲ್ಲಿಯೇ ಸಾವನ್ನಪ್ಪಿರುತಾನೆ.

ಈ ವಿಷಯವನ್ನು ನಾವು ನಮ್ಮ ಊರಿನ ಹಿರಿಯರಿಗೆ ತಿಳಿಸಿ, ನನ್ನ ಮಗನಿಗೆ ಆಟೋದಲ್ಲಿ ಹಾಕಿಕೊಂಡು

ಲಿಂಗಸಗೂರಿನ ಸರಕಾರಿ ಸಾರ್ವಜನಿಕ ಆಸ್ಪತ್ರೆ ತಂದು ತೋರಿಸಿದಾಗ ಆಸ್ಪತ್ರೆಯ ವೈದ್ಯರು ಈ ವ್ಯಕ್ತಿ ಮೃತಪಟ್ಟಿದ್ದಾನೆ ಎಂದಾಗ ನಾವು ನಮ್ಮ ಕುಟುಂಬದವರ ಜೊತೆಗೆ ಹಾಗೂ ನಮ್ಮ ಊರಿನ ಹಿರಿಯರನ್ನು ವಿಚಾರಿಸಿ ತಡವಾಗಿ ಠಾಣೆಗೆ ಬಂದು ದೂರನ್ನು ನೀಡಿದ್ದೇನೆಂದು . ಆ ಯುವಕನ ತಂದೆ ಕೊಟ್ಟ ದೂರಿನನ್ವಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆಂದು ತಿಳಿದು ಬಂದಿದೆ . ಈ ಘಟನೆಯ ನಂತರ ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ತಾಲೂಕು ಅಧ್ಯಕ್ಷರಾದ ವೆಂಕಟೇಶ್ ಎನ್ ರಾಥೋಡ್ ಜಿಲ್ಲಾ ಉಪಾಧ್ಯಕ್ಷರಾದ ಲಾಲಪ್ಪ ಡಿ ರಾಥೋಡ್ ರವರು ಜೆಸ್ಕಾಂ ಎಂ ಡಿ ಯವರಿಗೆ ದೂರವಾಣಿ ಕರೆ ಮುಖಾಂತರ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಊರಿನ ಹಿರಿಯರಾದ ವಿಠ್ಠಲ್ ಪವಾರ್ ಅಮರೇಶ್ ರಾಥೋಡ್. ಈಶ್ವರ್ ವಕೀಲ . ಗೋಪಾಲ್ ರಾಥೋಡ್. ವೀರೇಶ್ ರಾಥೋಡ್ ಬೂದೆಪ್ಪ ರಾಥೋಡ್ ಕೃಷ್ಣ ದರಿಯಪ್ಪ ರಾಥೋಡ್ ತಿಪ್ಪಣ್ಣ ಪವಾರ್ ಮುಂತಾದವರು ಹಾಜರಿದ್ದರು

ಮಹಿಳೆಯರಲ್ಲಿ ಮುಟ್ಟು ಸಹಜ ಪ್ರಕ್ರಿಯೆ ಹೊರತು ದೋಷಿತ ಕಳಂಕವಲ್ಲ: ಡಾ.ಅಯ್ಯನಗೌಡ

ಸಿಂಧನೂರು: ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮದ ಅಡಿಯಲ್ಲಿ ನಡೆಯುತ್ತಿರುವ ವಿಶ್ವಋತು ಚಕ್ರ ನೈರ್ಮಲ್ಯ ದಿನಾಚರಣೆಯ ಕಾರ್ಯಕ್ರಮವನ್ನು ಮುಟ್ಟಿನ ಸ್ನೇಹಿತ ಪ್ರಪಂಚಕ್ಕಾಗಿ ಎಲ್ಲರೂ ಒಗೋಣ ಎಂಬ ಘೋಷವಾಕ್ಯ ಹೇಳುತ್ತಾ ಮಹಿಳೆಯರಿಗೆ ಕಾಲೇಜಿನ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ಸೇವನೆ ಋತುಚಕ್ರ ನೈರ್ಮಲ್ಯದ ಅರಿವು ಮತ್ತು ಜಾಗೃತಿ ಬಗ್ಗೆ ತಿಳಿಸಿ, ಜೊತೆಗೆ ಮಹಿಳೆಯರಲ್ಲಿನ ಋತುಚಕ್ರದ ಸಂಬಂಧಿ ಸಮಸ್ಯೆಗಳ ಗೊಂದಲಗಳ ನಿವಾರಣೆಯ ಕುರಿತು ತಾಲೂಕು ವೈದ್ಯಾಧಿಕಾರಿ ಡಾ.ಅಯ್ಯನಗೌಡ ಆರೋಗ್ಯ ಜಾಗೃತಿಯನ್ನು ಮೂಡಿಸಿದರು.



ನಗರದ ಸನ್ ರೈಸ್ ಶಿಕ್ಷಣ ಸಂಸ್ಥೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ, ಮತ್ತು ತಾಲೂಕು ಸಾರ್ವಜನಿಕ ಆಸ್ಪತ್ರೆ ಸಿಂಧನೂರು, ಹಾಗೂ ನಗರ ದ ಸನ್ ರೈಸ್ ಕಾಲೇಜು ಇವರ ಸಂಯುಕ್ತಾಶ್ರ ಯದಲ್ಲಿ ಮೇ.29 ರಂದು ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ ಕಾರ್ಯ ಕ್ರಮ ಹಮ್ಮಿಕೊಂಡು ಮಾತನಾಡಿದ ಅವರು, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿನ ಸ್ಕಿಜೋಫ್ರೀನೀಯ ಕಾಯಿಲೆ ಕುರಿತು ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯದ ಸದೃಢತೆ ಕಾಪಾಡಿಕೊಳ್ಳುವಲ್ಲಿ ಕಾಳಜಿ ವಹಿಸಬೇಕೆಂದರು.

ಜಿಲ್ಲಾ ಮಾನಸಿಕ ಆರೋಗ್ಯ ಸಮಾಲೋಚಕ ಅರುಣ್ ಕುಮಾರ ಕೆ.ವಿ.ಬಿ.ಡಿ.ಟಿ.ಎಸ್ ಮೇಲ್ವಿಚಾರಕ ಎಫ್.ಎ.ಹಣಗಿ, ಎಲ್.ಎನ್.ಆರ್.ಕೆ.ಎಸ್.ಕೆ ಆಪ್ತ ಸಮಾಲೋಚಕ ರಾಮನುಜನ್ ಕುಮಾರ ವಿಶ್ವ ಋತುಚಕ್ರ ನೈರ್ಮಲ್ಯ ದಿನವನ್ನು ಉದ್ದೇಶಿಸಿ ರಾಷ್ಟ್ರೀಯ ಕಿಶೋರ್ ಸ್ವಾಸ್ಥದಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಟ್ಟಿನ ಸ್ನೇಹಿತ ಪ್ರಪಂಚಕ್ಕಾಗಿ ಹೋಗೋಣ ಎಂಬ ಘೋಷವಾಕ್ಯವನ್ನು ಹೇಳುತ್ತಾ ಋತುಚಕ್ರದ ವೇಳೆ ನೈರ್ಮಲ್ಯ ಕಾಪಾಡದಿದ್ದರೆ, ಏನಾಗುತ್ತದೆಂಬದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಯುಟಿಐ, ಆರ್‌ಟಿಐ, ಟಿಟಿಎಸ್ ಬಂಜೆತನ, ಪಿಐಡಿ ಹಾಗೂ ಇತರೆ ಅನೇಕ ಸಮಸ್ಯೆಗಳು ಮುಟ್ಟಿನ ನೈರ್ಮಲ್ಯ ಇಲ್ಲದೆ ಇರುವುದರಿಂದ ಆಗುವ ಸಂಭವಗಳು ಜಾಸ್ತಿ ಇರುತ್ತದೆ ಎಂದು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ, ಸ್ನೇಹ ಕ್ಲಿನಿಕ್ ಸೇವಾ ಸೌಲಭ್ಯ ಕುರಿತು ಹಾಗೂ ಋತುಚಕ್ರ ಸಂಬಂಧ ಸಮಸ್ಯೆಗಳ ನಿವಾರಣೆ ಬಗ್ಗೆ ವಿವರಿಸಿದರು.

ನಂತರ ಟಿಎಚ್‌ಓ ಗೀತಾ ಹಿರೇಮಠ ಮಾತನಾಡಿ, ಮುಟ್ಟಿನ ನೈರ್ಮಲ್ಯ ದಿನದ ಅಂಗವಾಗಿ ಮುಟ್ಟಿನ ಸ್ನೇಹಿತರಿಗೆ ಪರಿಸರ ನಿರ್ಮಾಣ ಮಾಡುವುದು ಮುಟ್ಟಿನ ಅವಧಿಯಲ್ಲಿ ಪಾಲಿಸಬೇಕಾದ ಕ್ರಮಗಳ ಕುರಿತು ಸಣ್ಣ ವಯಸ್ಸಿನಿಂದಲೇ ಅರಿವು ಮೂಡಿಸುವುದು ಮುಟ್ಟಿನ ಉತ್ಪನ್ನಗಳು ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಕಲ್ಪಿಸುವುದು, ಮುಟ್ಟಿನ ಸ್ನೇಹಿತ ಮುಟ್ಟಿಗೆ ಸಂಬಂಧಿಸಿದ ಸೂಕ್ತ ಆರೋಗ್ಯ ಸೇವೆಗಳನ್ನು ಒದಗಿಸುವುದು ಈ ಎಲ್ಲ ವಿಷಯಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳಲ್ಲಿರುವ ಗೊಂದಲಗಳ ನಿವಾರಣೆಯ ಕುರಿತು ಮಾಹಿತಿ ನೀಡಿದರು.

ಇದೇ ವೇಳೆ ಎಸ್.ಟಿ.ಎಸ್ ಅಧಿಕಾರಿ ಯಮನೂರಪ್ಪಸಂಸ್ಥೆಯ ಉಪಾಧ್ಯಕ್ಷ ಇರ್ಷಾದ್, ಪ್ರಾಚಾರ್ಯ ಸೀರಿಲ್, ಸುರೇಶ ರೆಡ್ಡಿ, ಗಂಗಮ್ಮ, ಮಂಜುಳಾ, ಕಾಲೇಜಿನ ವಿದ್ಯಾರ್ಥಿಗಳು, ಉಪಸ್ಥಿತರಿದ್ದರು

ಪ್ರಿಯಾಂಕ್ ಖರ್ಗೆಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ : ಚಿತ್ತಾಪುರದಲ್ಲಿ ಕಾಂಗ್ರೆಸ್ ಮುಖಂಡರಿಂದ ಪ್ರತಿಭಟನೆ



ಚಿತ್ತಾಪುರ ,ಮೇ.30-

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿ ನೇಮಕ ಮಾಡಬೇಕು ಎಂದು ಆಗ್ರಹಿಸಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಎದುರು ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು.

ಈ ವೇಳೆ ಘೋಷಣೆಗಳನ್ನು ಕೂಗಿ ತಮ್ಮ ಒತ್ತಾಯ ವ್ಯಕ್ತಪಡಿಸಿದ ಮುಖಂಡರು, 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಪ್ರಿಯಾಂಕ್ ಖರ್ಗೆ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಮೂರು ಬಾರಿ ಚಿತ್ತಾಪುರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿರುವ ಪ್ರಿಯಾಂಕ್ ಖರ್ಗೆ ಅವರು ಹ್ಯಾಟ್ರಿಕ್ ಸಚಿವರಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಿದ್ದು, ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರ ತತ್ವಗಳನ್ನು ಅಳವಡಿಸಿಕೊಂಡು ಸರ್ವ ಸಮುದಾಯದ ಜನರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಮುಖಂಡರು ಅಭಿಪ್ರಾಯಪಟ್ಟರು.

ಸಂವಿಧಾನದ ಮೌಲ್ಯಗಳ ಪರವಾಗಿ ಸದಾ ಗಟ್ಟಿ ಧ್ವನಿಯಾಗಿರುವ ಅವರು, ಆರ್‌ಎಸ್‌ಎಸ್ ಹಾಗೂ ಮನುವಾದಿ ಶಕ್ತಿಗಳ ವಿರುದ್ಧ ಸ್ಪಷ್ಟ ನಿಲುವು ಹೊಂದಿದ್ದಾರೆ. ಬಿಜೆಪಿಯ ಹಲವು ಹಗರಣಗಳನ್ನು ದಾಖಲೆ ಸಮೇತ ಬಯಲಿಗೆಳೆದ ನಾಯಕ ಪ್ರಿಯಾಂಕ್ ಖರ್ಗೆ ಎಂದು ಹೇಳಿದರು.

ಪ್ರಿಯಾಂಕ್ ಖರ್ಗೆ ಅವರು ಕಲ್ಯಾಣ ಕರ್ನಾಟಕ ಭಾಗದ ದಕ್ಷ ಹಾಗೂ ದೃಢ ನಾಯಕನಾಗಿದ್ದು, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಐಟಿ-ಬಿಟಿ ಸಚಿವರಾಗಿ ಜನಪರ ಕೆಲಸಗಳನ್ನು ಮಾಡಿದ್ದಾರೆ. ಯುವಕರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಜೊತೆಗೆ ಶೋಷಿತ ವರ್ಗಗಳ ಧ್ವನಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೋಕಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಂತೆ ಪ್ರಿಯಾಂಕ್ ಖರ್ಗೆ ಕೂಡ ರಾಜ್ಯದ ಅಭಿವೃದ್ಧಿಗಾಗಿ ಹಗಲು-ರಾತ್ರಿ ಶ್ರಮಿಸುತ್ತಿದ್ದಾರೆ. ಆದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಅವರು ಅವರನ್ನು ಗುರುತಿಸಿ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಮುಖಂಡರು ಒತ್ತಾಯಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಮೇಶ ಮರಗೋಳ, ಕಾಂಗ್ರೆಸ್ ಮುಖಂಡರಾದ ಮುಕ್ತಾರ ಪಟೇಲ್, ವೀರಣ್ಣಗೌಡ ಪರಸರೆಡ್ಡಿ ಮಾತನಾಡಿದರು. ನಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ಸಾಲಿ ಅವರ ಮುಖಾಂತರ ಕೆಪಿಸಿಸಿ ಅಧ್ಯಕ್ಷರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶಿವರುದ್ರ ಭೀಣಿ, ಸುನೀಲ್ ದೊಡ್ಮನಿ, ಬಸವರಾಜ ಹೊಸ್ಸಳ್ಳಿ, ಜಗದೇವರೆಡ್ಡಿ ರಾಮತೀರ್ಥ, ನಿಂಗಣ್ಣ ಹೇಗಲೇರಿ, ನಾಮದೇವ ರಾಠೋಡ, ಮಲ್ಲಿಕಾರ್ಜುನ ಕಾಳಗಿ, ಶೀಲಾ ಕಾಶಿ, ಚಂದ್ರಶೇಖರ ಕಾಶಿ, ಬಸವರಾಜ ಪೂಜಾರಿ ಮೊಗಲಿ, ದೇವಿಂದ್ರ ಅಣಕಲ್, ಮಲ್ಲಿಕಾರ್ಜುನ ಬಮ್ಮನಳ್ಳಿ, ಜಗದೀಶ ಚವ್ಹಾಣ, ಉದಯಕುಮಾರ ಸಾಗ್ರ್ ದೇವು ಯಾಬಾಳ, ನಾಗಯ್ಯ ಗುತ್ತೇದಾರ, ಹಣಮಂತ ಸಂಕನೂರ, ಶ್ರೀಮಂತ ಗುತ್ತೇದಾರ, ನಾಗರೆಡ್ಡಿ ಗೋಪಸೇನ್, ಬಸವರಾಜ ಚಿನ್ನಮಳ್ಳಿ, ನಯೀಮ್, ಶೇಖ ಬಬ್ಲು, ಸಂತೋಷ ಪೂಜಾರಿ, ಬಾಬು ಕಾಶಿ, ಜಗದೀಶ ಮುಡಬೂಳಕ್ರ್ ಲೋಹಿತ್, ಆರ್.ಡಿ ಪಾಟೀಲ್, ವಿನ್ನು ಜೆಡಿ, ಓಕಾಂರ ರೇಶ್ಮಿ, ಮೋಸಿನ್ ಚೈನು ಸೇರಿದಂತೆ ಕಾಂಗ್ರೆಸ್ ಪಕ್ಷದ ಅನೇಕ ಮುಖಂಡರು, ಕಾರ್ಯಕರ್ತರು ಸೇರಿದಂತೆ ಅಭಿಮಾನಿಗಳು ಇದ್ದರು.



ಕನ್ನಡ ಸಂಸ್ಕೃತಿ ಉಳಿವಿಗೆ ಎಲ್ಲರ ಸಹಕಾರ ಅಗತ್ಯ: ಸಿದ್ರಾಮ್ ಶಿಂಧೆ

ಬೀದರ್,ಮೇ.30-

ಜಿಲ್ಲೆಯಲ್ಲಿ ಸಂಸ್ಕೃತಿಯನ್ನು ಗಟ್ಟಿಯಾಗಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ್ ಶಿಂಧೆ ತಿಳಿಸಿದರು.

ನಗರದ ಡಾ. ಚೆನ್ನಬಸವ ಪಟ್ಟದೇವರು ರಂಗ ಮಂದಿರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಪ್ರಚಾರ ಕಾರ್ಯ ಸಮಿತಿ ಮಳಚಾಪೂರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬುಧವಾರ ಸಾಯಂಕಾಲ ಸಂಗೀತ ಮಹೋತ್ಸ ವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಪ್ರಚಾರ ಕಾರ್ಯ ಸಮಿತಿಯು ಜಿಲ್ಲೆಯಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮಹತ್ವದ ಕಾರ್ಯ ಮಾಡುತ್ತಿದೆ. ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿವಿಧ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡುತ್ತಿದ್ದು, ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ್ ಸೋನಾರೆ ಅವರು ಮಾತನಾಡಿ, ಕಲಾವಿದರು ಸ್ವಾಭಿಮಾನಿಗಳಾಗಬೇಕು. ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ಗೌರವ ನೀಡಿದರೆ ಉತ್ತಮ ಬದುಕು ಸಾಧ್ಯವಾಗುತ್ತದೆ. ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕು ಎಂದು ಅಭಿಪ್ರಾಯಪಟ್ಟರು. ಕರ್ನಾಟಕ ಬೌದ್ಧ ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷ ಎಸ್.ಎಂ.ಜನವಾಡಕರ್ ಅವರು ಮಾತನಾಡಿ, ಮಾನವ ಹುಟ್ಟಿದ್ದಾಗಲೇ ಜಾನಪದವು ಜನ್ಮ ತಾಳಿದೆ. ಜಾನಪದವನ್ನು ಉಳಿಸಿ ಬೆಳೆಸುತ್ತಿರುವವರು ಗ್ರಾಮೀಣ ಭಾಗದ ಜನರಾಗಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುಮಾರು 12 ಸಾಂಸ್ಕೃತಿಕ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು. ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಶುಭ ಕೋರಲಾಯಿತು. ಪತ್ರಕರ್ತರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ರಮೇಶ ದೊಡ್ಡಿ ಮಳಚಾಪೂ್ರ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಂಜೀವಕುಮಾರ್ ಅತಿವಾಳೆ, ಸಾಹಿತ್ಯ ರತ್ನ ಅಣ್ಣಾಭಾವು ಸಾಠೆ ಟ್ರಸ್ಟ್ ಅಧ್ಯಕ್ಷ ಎಂ.ಎಸ್. ಮನೋಹ್ರ ಹಿರಿಯ ಸಾಹಿತಿ ರಾಮಚಂದ್ರ ಗಣಾಪೂ್ರ ಬುದ್ಧ ಬೆಳಕು ಟ್ರಸ್ಟ್ ಅಧ್ಯಕ್ಷ ಮಹೇಶ್ ಗೋರನಾಳಕ್ರ ಮಳಚಾಪೂರ್ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಮುಖ್ಯಗುರು ರಾಮಶೆಟ್ಟಿ, ಕರ್ನಾಟಕ ಜಾನಪದ ಪರಿಷತ್ತು ತಾಲೂಕಾಧ್ಯಕ್ಷ ಎಸ್.ಬಿ. ಕುಚಬಾಳ್ ಹಾಗೂ ಕರ್ನಾಟಕ ವನ್ಯಜೀವಿ ಮಂಡಳಿ ಸದಸ್ಯ ವಿನಯಕುಮಾರ್ ಮಾಳಗೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.



19 ಲಕ್ಷ ರೂ.ಗಿಂತ ಅಧಿಕ ಮೌಲ್ಯದ ಗಾಂಜಾ ವಶ : ಮಹಿಳೆಯ ಬಂಧನ

ಬೀದರ್ ,ಮೇ.30-

ನಗರದ ಸಂಗಮೇಶ್ವರ್ ಕಾಲೋನಿಯ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಒಟ್ಟು 19,23,800 ರೂ. ಬೆಲೆ ಬಾಳುವ ಒಟ್ಟು 38 ಕೆ.ಜಿ 476 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದ್ದು, ಒಬ್ಬ ಆರೋಪಿ ಮಹಿಳೆಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ ಘಟನೆ ನಡೆದಿದೆ.

ನಗರದ ಸಂಗಮೇಶ್ವರ್ ಕಾಲೋನಿಯ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿರುವ ಮಹಿಳೆಯೊಬ್ಬಳು ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ತನ್ನ ಮನೆಯಲ್ಲಿ ಗಾಂಜಾ ಸಂಗ್ರಹಿಸಿದ್ದ ಖಚಿತ ಮಾಹಿತಿ ಬಂದ ಹಿನ್ನಲೆಯಲ್ಲಿ ಪೊಲೀಸರು ದಾಳಿ ನಡೆಸಿದ್ದರು.

ದಾಳಿಯ ವೇಳೆ ಮನೆಯನ್ನು ಶೋಧಿಸಿದ್ದಾಗ ಮನೆಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ನಲ್ಲಿ ಸುತ್ತಿಟ್ಟ 12 ಗಾಂಜಾ ಪ್ಯಾಕೆಟ್ ಸಿಕ್ಕಿದ್ದು, ಒಟ್ಟು 19,23,800 ರೂ. ಬೆಲೆ ಬಾಳುವ 38 ಕೆ.ಜಿ 476 ಗ್ರಾಂ ಗಾಂಜಾ ಇರುವುದು ಪತ್ತೆಯಾಗಿದೆ. ಅಕ್ರಮವಾಗಿ ಗಾಂಜಾ ಸಂಗ್ರಹಿಸಿಟ್ಟಿದ್ದ ಆ ಮಹಿಳೆಯನ್ನು ವಿಚಾರಿಸಿದಾಗ ಈ ಗಾಂಜಾವು ಜಂಬಗಿ ತಾಂಡಾದ ಒಬ್ಬ ವ್ಯಕ್ತಿಯ ಹತ್ತಿರ ಕಡಿಮೆ ಬೆಲೆಗೆ ಖರಿದಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸಂಗ್ರಹಿಸಿರುವುದಾಗಿ ತಿಳಿಸಿದ್ದಾಳೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ ಗಾಂಧಿಗಂಜ್ ಪೊಲೀಸ್ ಠಾಣೆಯಲ್ಲಿ ಬಂಧಿತ ಮಹಿಳೆ ಸೇರಿದಂತೆ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ತಿಳಿದು ಬಂದಿದೆ.

ಕೋಟೆ ಆಂಜನೇಯ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿಸಿದರೆ ಹೋರಾಟ: ಎಚ್.ಕೆ.ಹಾಲೇಶ್



ಹರಪನಹಳ್ಳಿ ,ಮೇ.30-

ನಗರದ ಐತಿಹಾಸಿಕ ಪರಂ ಪರೆವುಳ್ಳ ಶ್ರೀ ಕೋಟೆ ಆಂಜನೇಯ ದೇವಸ್ಥಾನವನ್ನು ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಸೇರಿಸಲು ಮುಂದಾಗಿರುವ ತಾಲೂಕು ಆಡಳಿತದ ಕ್ರಮ ಸರಿಯಲ್ಲ ತಕ್ಷಣ ಅದನ್ನು ತಡೆಹಿಡಿಯಬೇಕು ಎಂದು ಪುರಸಭೆ ಮಾಜಿ ಅಧ್ಯಕ್ಷ, ವಾಲ್ಮೀಕಿ ಸಮಾಜದ ಮುಖಂಡ ಹೆಚ್.ಕೆ.ಹಾಲೇಶ್ ಹೇಳಿದರು.

ನಗರದ ಕೋಟೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೆಚ್.ಕೆ.ಹಾಲೇಶ್, ನೂರಾರು ವರ್ಷಗಳ ಇತಿಹಾಸ ಇರುವ ಕೋಟೆ ಆಂಜನೇಯ ದೇವಸ್ಥಾನದ ಪರಂಪರೆ ಸಂಸ್ಕೃತಿಯನ್ನು ಉಳಿಸಲಿಕ್ಕೆ ಆಂಜನೇಯ ಸೇವಾ ಸಮಿತಿಯವರು ನಿರಂತರವಾಗಿ ಶ್ರಮಿಸುವ ಮೂಲಕ ಅಭಿವೃ ದ್ಧಿಪಡಿಸಿಕೊಂಡು ಬಂದಿದ್ದಾರೆ. ಆದರೆ, ಕೆಲವರು ಕೋಟೆ ಆಂಜನೇಯ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಿ ಅಭಿವೃದ್ಧಿಪಡಿಸಬೇಕು ಎಂದು ಹೇಳಿಕೆ ನೀಡಿದ್ದಾರೆ. ಇದು ಖಂಡನೀಯ, ದೇವಸ್ಥಾನಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಆದಾಯ ಇಲ್ಲ. ಕೋಟ್ಯಾಂತರ ಬೆಲೆ ಬಾಳುವ ಆಸ್ತಿಯೂ ಇಲ್ಲ. ಭಕ್ತರಿಂದ ಬಂದಂತಹ ದೇಣಿಗೆ, ಸಹಕಾರದಿಂದ ಸಮಿತಿಯವರು ಅಭಿವೃದ್ಧಿ ಮಾಡಿದ್ದಾರೆ ಎಂದರು.

ಈ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ತಹಶೀಲ್ದಾರ್ ನೇತೃತ್ವದಲ್ಲಿ ಈಗಲೂ ಅಡಾಕ್ ಸಮಿತಿಯೊಂದು ಜಾರಿಯಲ್ಲಿದೆ. ಆದರೆ ಯಾಕೆ ಅಭಿವೃದ್ಧಿ ಕಾಮಗಾರಿ ಕೈಗೊಂಡಿಲ್ಲ? ಈ ಸಂಬಂಧ ಅನೇಕ ಬಾರಿ ಜಿಲ್ಲಾಧಿಕಾರಿ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಿತಿಯಿಂದ ಅರ್ಜಿ ಸಲ್ಲಿಸಿದ್ದೇವೆ. ಆದರೂ ಕೂಡ ಯಾರು ಇತ್ತ ಗಮನ ಹರಿಸಿಲ್ಲ ಎಂದರು.

ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಇದುವರೆಗೂ ಯಾವುದೇ ರೀತಿಯಲ್ಲಿ ಭ್ರಷ್ಟಾಚಾರ, ಅವ್ಯವಹಾರ, ಹಣದ ದುರುಪಯೋಗ ನಡೆದಿಲ್ಲ. ಈಗಾಗಲೇ ತಾಲೂಕಿನ ಅನೇಕ ದೇವಸ್ಥಾನಗಳು ಮುಜರಾಯಿ ಇಲಾಖೆಗೆ ಸೇರಿವೆ. ಅಲ್ಲಿ ಏನು ಅಭಿವೃದ್ಧಿಯಾಗಿವೆ ಎಂಬುದರ ಕುರಿತು ತಾಲೂಕು ಆಡಳಿತ ಉತ್ತರಿಸಬೇಕು. ಕೋಟೆ ಆಂಜನೇಯ ದೇವಸ್ಥಾನದ ಜಾಗ ಒತ್ತುವರಿಯಾಗಿದೆ. ಈ ಬಗ್ಗೆ ನ್ಯಾಯಲಯದ ಆದೇಶವಿದ್ದರೂ ತಾಲೂಕು ಆಡಳಿತ ಯಾಕೆ ತೆರವುಗೊಳಿಸಲು ಮುಂದಾಗುತ್ತಿಲ್ಲ? ಒಂದು ವೇಳೆ ಕೋಟೆ ಆಂಜನೇಯ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಲು ಮುಂದಾದರೆ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಹೋರಾಟಗಾರ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಸಾರ್ವಜನಿಕವಾಗಿ ಚರ್ಚೆ ಮಾಡದೆ ಕೋಟೆ ಆಂಜನೇಯ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸುವುದು ಸೂಕ್ತವಲ್ಲ, ಇದರಿಂದ ಭಕ್ತರಲ್ಲಿ ಗೊಂದಲ ಉಂಟಾಗುತ್ತದೆ ಎಂದರು.

ಈ ವೇಳೆ ವಿಎಚ್‌ಪಿ ಮುಖಂಡ ಎಚ್.ಎಂ.ಜಗದೀಶ್, ಎಚ್. ವೆಂಕಟೇಶ್ ಮಾತನಾಡಿ ದರು. ಈ ಸಂದರ್ಭದಲ್ಲಿ ಮುಖಂಡರಾದ ಚಿಕ್ಕೇರಿ ಬಸಪ್ಪ, ಗಿಡ್ಡಳ್ಳಿ ನಾಗರಾಜ್ ದ್ಯಾಮಜ್ಜಿ ದಂಡೆಪ್ಪ, ತಳವಾರ ಅಜ್ಜಯ್ಯ, ಪಟ್ನಮದ ಪರಶುರಾಮ, ಮ್ಯಾಕಿ ಸಣ್ಣ ಹಾಲಪ್ಪ, ಕಮ್ಮಾರ ಹಾಲಪ್ಪ, ಚಿಕ್ಕೆರಿ ಯಂಕಪ್ಪ, ದ್ಯಾಮಜ್ಜಿ ಹನುಮಂತಪ್ಪ, ನಿಟ್ಟೂರು ತಿಮ್ಮಣ್ಣ, ಆಲೂರು ಶ್ರೀನಿವಾಸ, ಗುಂಡಿ ಮಂಜುನಾಥ್, ಬಡಗಿ ಮಂಜು, ಅಶೋಕ, ತಿಮ್ಮಣ್ಣ, ಚನ್ನಪ್ಪ ಹನುಮಂತ ಸೇರಿದಂತೆ ಇತರರು ಉಪಸ್ಥಿತರಿದ್ದರು.



ನಾಯಿ ಕಡಿತದಿಂದ ಮೃತಪಟ್ಟ ಮಗುವಿನ ಕುಟುಂಬಕ್ಕೆ 50 ಸಾವಿರ ರೂ. ಪರಿಹಾರ ವಿತರಣೆ

ಹುಮನಾಬಾದ್,ಮೇ.30-

ನಾಯಿ ಕಡಿತಕ್ಕೆ ಒಳಗಾಗಿ ಮೃತಪಟ್ಟ ಮಗುವಿನ ಕುಟುಂಬಕ್ಕೆ ದುಬಲಗುಂಡಿ ಗ್ರಾಮ ಪಂಚಾಯತ್ ವತಿಯಿಂದ 50 ಸಾವಿರ ರೂ. ಪರಿಹಾರ ಧನ ವಿತರಿಸಲಾಯಿತು.

ತಾಲೂಕಿನ ದುಬಲಗುಂಡಿ ಗ್ರಾಮದಲ್ಲಿ ಮೇ.9ರಂದು ನಾಯಿ ಕಡಿತದಿಂದ ನಾಲ್ಕು ತಿಂಗಳ ಹಸುಗೂಸು ಮೃತಪಟ್ಟಿತ್ತು. ಶುಕ್ರವಾರ ಗ್ರಾಮ ಪಂಚಾಯತ್ ಆಡಳಿತ ಅಧಿಕಾರಿ ಅಂಜುಮ್ ತಬಸ್ಸುಮ್ ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ ಪಾಟೀಲ್ ಮೃತ ಮಗುವಿನ ಮನೆಗೆ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿ, ಪಂಚಾಯತಿ ವತಿಯಿಂದ 50 ಸಾವಿರ ರೂ. ಧನ ಸಹಾಯದ ಚೆಕ್ ಹಸ್ತಾಂತರಿಸಿದರು.

ಈ ವೇಳೆ ಗ್ರಾಮ ಪಂಚಾಯತ್ ಮಾಜಿ ಸದಸ್ಯ, ವಕೀಲ ವಿಜಯಕುಮಾರ್ ನಾತೆ ಅವರು ಮಾತನಾಡಿ, ಮೃತ ಮಗುವಿನ ಕುಟುಂಬಕ್ಕೆ ಸರ್ಕಾರದಿಂದ 5 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಐಟಿಐ ಕಾಲೇಜು ಪ್ರವೇಶಾತಿಗೆ ಅರ್ಜಿ ಆಹ್ವಾನ

ಬಳ್ಳಾರಿ,ಮೇ.30-

ನಗರದ ರೇಡಿಯೋ ಪಾರ್ಕ್ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಪ್ರಸಕ್ತ 2026-27 ನೇ ಸಾಲಿಗೆ ವಿವಿಧ ವೃತ್ತಿಗಳ 569 ಸ್ಥಾನಗಳ ಪ್ರವೇಶಕ್ಕಾಗಿ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯ ಪಂಡಿತಾರಾಧ್ಯ ಅವರು ತಿಳಿಸಿದ್ದಾರೆ. 10 ನೇ ತರಗತಿ ಪಾಸ್/ಫೇಲ್ ಆದ ಅಭ್ಯರ್ಥಿಗಳು ನೇರವಾಗಿ ಸಂಸ್ಥೆಗೆ ಭೇಟಿ ನೀಡಿ ಆಫ್ ಲೈನ್ ಮೂಲಕ ಅರ್ಜಿ ಪಡೆದು ಖಾಲಿ ಇರುವ ವಿವಿಧ ವೃತ್ತಿಗಳ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಬಹುದು. ಪ್ರತಿದಿನ ಆಫ್ ಲೈನ್ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮಾರನೇ ದಿನವೇ ಮೆರಿಟ್ ಆಧಾರದಲ್ಲಿ ದಾಖಲೆ ಪರಿಶೀಲನೆ ನಂತರ ಪ್ರವೇಶ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ಜೂನ್ 02 ರಿಂದ ಆಗಸ್ಟ್ 31 ಕೊನೆಯ ದಿನವಾಗಿದೆ. ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿದ ಸಂಸ್ಥೆಯಲ್ಲಿ ಮಾತ್ರ ದಾಖಲೆ ಪರಿಶೀಲನೆಗೆ ಕಡ್ಡಾಯವಾಗಿ ಹಾಜರಾಗಬೇಕು. ಸೂಚನೆ: ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಮಯದಲ್ಲಿ ನೀಡುವ ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ವಿಳಾಸವನ್ನು ಪ್ರವೇಶಾತಿ ಮತ್ತು ಪರೀಕ್ಷೆ ಮುಗಿಯುವವರೆಗೂ ಬದಲಾವಣೆ ಮಾಡುವಂತಿಲ್ಲ.

ಹೆಚ್ಚಿನ ಮಾಹಿತಿಗಾಗಿ ಮೊ.9902351985 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ವಂದೇ ಮಾತರಂ - ಕಾಂಗ್ರೆಸ್ ಸಿದ್ಧಾಂತ: ಡಿಕೆ ಆಯ್ಕೆ ಏನು?

ವಂದೇ ಮಾತರಂನ ಮೊದಲ ಎರಡು ಚರಣಗಳನ್ನು ಹಾಡುವುದರಲ್ಲಿ ಕಾಂಗ್ರೆಸ್‌ಗೆ ಯಾವುದೇ ಗೊಂದಲವಿಲ್ಲ. ಯಾಕೆಂದರೆ, ಆ ಎರಡು ಚರಣಗಳನ್ನು ರಾಷ್ಟ್ರೀಯ ಗೀತೆಯಾಗಿ ಘೋಷಿಸಿದ್ದೇ ಕಾಂಗ್ರೆಸ್. ಆದರೆ, ಪೂರ್ಣಗೀತೆ ಹಾಡುವ ವಿಚಾರದಲ್ಲಿ ಡಿ.ಕೆ ಶಿವಕುಮಾರ್ ಏನು ಮಾಡಬಹುದು?



ವಂದೇ ಮಾತರಂ ಗೀತೆಯ 150ನೇ ವರ್ಷಾಚರಣೆಯನ್ನು ಮೋದಿ ಸರ್ಕಾರ ಘೋಷಿಸಿ ಆರು ತಿಂಗಳು ಕಳೆದಿವೆ. ಇನ್ನೂ ಆರು ತಿಂಗಳು ವಂದೇ ಮಾತರಂ ಆಚರಣೆ ಮುಂದುವರೆಯಲಿದೆ. ಈ ಗೀತೆಯು ಹಾಡುವುದಕ್ಕಿಂತ ಹೆಚ್ಚಾಗಿ ವಿವಾದದ ಸುಳಿಯಲ್ಲೇ ಸುತ್ತುತ್ತಿದೆ. ಕೇಂದ್ರ ಸರ್ಕಾರವೇ ಇದನ್ನು ವಿವಾದದ ಕೇಂದ್ರವನ್ನಾಗಿಸಿದೆ. ತನ್ನ ಸೈದ್ಧಾಂತಿಕ ಕೋಮುದ್ವೇಷದ ಹೂರಣವನ್ನು ದೇಶಾದ್ಯಂತ ಬಿತ್ತುವ ತಂತ್ರ-ಕುತಂತ್ರ ಹೆಣೆಯುತ್ತಿದೆ. ಸದ್ಯ, ಕೇರಳದಲ್ಲಿ ವಂದೇ ಮಾತರಂ ವಿವಾದ ಮುಂಚೂಣಿಯಲ್ಲಿದೆ.

ಕೇರಳದ ಹೊಸ ಸರ್ಕಾರದ ಮೊದಲ ವಿಧಾನಸಭಾ ಅಧಿವೇಶನದಲ್ಲಿ ಭಾಷಣ ಮಾಡಿದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು, ಸದನದಲ್ಲಿ ವಂದೇ ಮಾತರಂ ಗೀತೆಯನ್ನು ಪೂರ್ತಿ ಹಾಡಿಲ್ಲವೆಂದು ಸಿಟ್ಟಾಗಿದ್ದಾರೆ. ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರ ಅಸಮಾಧಾನವು ವಂದೇ ಮಾತರಂ ಕುರಿತ ಚರ್ಚೆಯನ್ನು ಮತ್ತೆ ಮುನ್ನಲೆಗೆ ತಂದಿದೆ.

ರಾಜ್ಯಪಾಲರು ಸಿಟ್ಟಾದರೂ, ಕೇರಳ ಸರ್ಕಾರ ಮತ್ತು ವಿಪಕ್ಷಗಳು ಶಾಂತಚಿತ್ತದಿಂದಿವೆ. ಆಡಳಿತಾರೂಢ ಕಾಂಗ್ರೆಸ್ ನೇತೃತ್ವದ ಯುಡಿಎ ಮತ್ತು ಮುಖ್ಯಮಂತ್ರಿ ವಿ.ಡಿ ಸತೀಶನ್ ಅವರು ವಂದೇ ಮಾತರಂ ಅನ್ನು ಪೂರ್ಣ ಹಾಡಲೇಬೇಕೆಂಬುದು ಕಡ್ಡಾಯವಲ್ಲ. ಸಂವಿಧಾನದಲ್ಲಿ ಅಂತಹ ಯಾವುದೇ ನಿಬಂಧನೆಗಳಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಮಾತಿಗೆ ವಿಪಕ್ಷ ನಾಯಕ ಪಿಣರಾಯಿ ವಿಜಯನ್ ಕೂಡ ದನಿಗೂಡಿಸಿದ್ದಾರೆ.

ತಮಿಳುನಾಡಿನಲ್ಲಿ, ಜೋಸೆಫ್ ವಿಜಯ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ವೇಳೆ ವಂದೇ ಮಾತರಂ ಅನ್ನು ಪೂರ್ತಿ ಹಾಡಲು ಅವಕಾಶ ನೀಡಲಾಗಿತ್ತು. ವಿಜಯ್ ನಡೆಗೆ ರಾಜ್ಯಾದ್ಯಂತ ಭಾರೀ ಆಕ್ರೋಶ ವಿರೋಧಗಳು ವ್ಯಕ್ತವಾಗಿದ್ದವು. ದಕ್ಷಿಣ ಭಾರತದ ರಾಜ್ಯಗಳಲ್ಲಿ ವಂದೇ ಮಾತರಂ ಸೇರಿದಂತೆ ಹಿಂದಿ ಸಾಂಸ್ಕೃತಿಕ ವಿಷಯಗಳನ್ನು ಕೇಂದ್ರ ಸರ್ಕಾರ ಬಲವಂತವಾಗಿ ಹೇರುತ್ತಿದೆ ಎಂಬ ಆಕ್ರೋಶವಿದೆ.

ವಂದೇ ಮಾತರಂ ಅನ್ನು ಪೂರ್ತಿಯಾಗಿ ಹಾಡುವುದು ಬಿಜೆಪಿಯ ಸಾಂಸ್ಕೃತಿಕ ಅಜೆಂಡಾವಾಗಿದೆ. ಸಂವಿಧಾನದ ಧರ್ಮನಿರಪೇಕ್ಷ ತತ್ವವನ್ನು ಬುಡಮೇಲು ಮಾಡುವುದು ಮತ್ತು ಅಲ್ಪಸಂಖ್ಯಾತರ ಭಾವನೆಗಳಿಗೆ ಧಕ್ಕೆ ತರುವುದು ಆರ್‌ಎಸ್‌ಎಸ್/ಬಿಜೆಪಿಯ ತಂತ್ರವೆಂಬ ಭಾವನೆ ದಕ್ಷಿಣ ರಾಜ್ಯಗಳಲ್ಲಿವೆ.

ಈ ವಿರೋಧ, ಆಕ್ಷೇಪಗಳು ರಾಜಕೀಯವಷ್ಟೇ ಅಲ್ಲ. ವಂದೇ ಮಾತರಂ ಗೀತೆಯ ಇತಿಹಾಸ ಮತ್ತು ವಿವಾದದ ಬೇರುಗಳೇ ಆ ರೀತಿಯಲ್ಲಿವೆ. 1870ರ ದಶಕದಲ್ಲಿ ಬಂಕಿಮಚಂದ್ರ ಚಟರ್ಜಿ ಅವರು ಬರೆದ ಈ ಗೀತೆ, ಆನಂದಮಠ (1882) ಕಾದಂಬರಿಯಲ್ಲಿದೆ. ಈ ಗೀತೆಯ ಮೊದಲ ಚರಣಗಳು ಇಂಪಾಗಿದ್ದರೂ, ಕಿವಿಗೆ ಕಂಪು ನೀಡಿದರೂ, ನಂತರದ ಚರಣಗಳಲ್ಲಿರುವುದು ಕೇವಲ ದ್ವೇಷ, ಪ್ರಚೋದನೆ, ಹಿಂಸೆ ಸಾರುತ್ತವೆ.

ವಂದೇ ಮಾತರಂ ಗೀತೆ ರಚನೆಯಾದ ಸಮಯದಲ್ಲಿ, ಭೀಕರ ಕ್ಷಾಮವು ಪಶ್ಚಿಮ ಬಂಗಾಳವನ್ನು ಧ್ವಂಸಗೊಳಿಸಿತ್ತು. ಆಗ ಬ್ರಿಟಿಷರ ಕೈಗೊಂಬೆಯಂತಿದ್ದ ನವಾಬರು ಬಂಗಾಳವನ್ನು ಆಳುತ್ತಿದ್ದರು. ಬರ, ಬೆಳೆ ನಷ್ಟದ ನಡುವೆಯೂ ಬ್ರಿಟಿಷ್ ಅಧಿಕಾರಿಗಳು ರೈತರಿಂದ ಹೆಚ್ಚು ತೆರಿಗೆ (ಧಾನ್ಯ) ವಸೂಲಿ ಮಾಡುತ್ತಿದ್ದರು. ಆ ಸಮಯದಲ್ಲಿ, ನವಾಬರು ಮತ್ತು ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಹಿಂದು-ಮುಸ್ಲಿಮರು ಯುದ್ಧಗಳನ್ನು ನಡೆಸಿದರು. ಆದರೆ, ಬಂಕಿಮ್ ಚಂದ್ರ ಅವರು ಮುಸ್ಲಿಂ ನವಾಬನನ್ನು ಮಾತ್ರವೇ ಸಂಪೂರ್ಣವಾಗಿ ತಪ್ಪಿತಸ್ಥನೆಂದು ಪರಿಗಣಿಸಿದರು. ತಮ್ಮ ನಿರೂಪಣೆಯಲ್ಲಿ ನವಾಬರು ಮತ್ತು ಬ್ರಿಟಿಷರ ವಿರುದ್ಧ ಮುಸ್ಲಿಂ ಫಕೀರರು ನಡೆಸಿದ ದಂಗೆಗಳನ್ನು ಮರೆಮಾಚಿದರು. ಪರಿಣಾಮ, ನವಾಬನ ವಿರುದ್ಧದ ನಿರೂಪಣೆಯು ಮುಸ್ಲಿಂ ದುಷ್ಕೃತ್ಯದ ಚಿತ್ರಣವಾಗಿ ಪಸರಿಸಿತು.

ಗೀತೆಯು ಮೃದುವಾಗಿ ಪ್ರಾರಂಭವಾಗುತ್ತದೆ. ಮೊದಲ ಎರಡು ಚರಣಗಳಲ್ಲಿ ಸಮೃದ್ಧಗೊಂಡ ಶಾಂತ ಭೂಮಿಯನ್ನು ಸೊಂಪಾದ ಸಂಸ್ಕೃತ ಪದಗಳನ್ನು ಬಳಸಿ ಆಹ್ವಾನಿಸುತ್ತದೆ. ಆದರೆ, ಮೂರನೇ ಚರಣದಿಂದ ಅದರ ಅಸಲಿಯತ್ತು ಆರಂಭವಾಗುತ್ತದೆ. ಕ್ಷಣಾರ್ಧದಲ್ಲಿ ಗೀತೆಯು ಕತ್ತಿಗಳ ಘರ್ಜನೆಯಾಗಿ, ಶತ್ರುಗಳಿಗೆ ವಿನಾಶ ಉಂಟುಮಾಡುವ ಗುಡುಗಿನ ಧ್ವನಿಗಳಾಗಿ ರೂಪಾಂತರಗೊಳ್ಳುತ್ತದೆ. ಭೂಮಿಯು ರಾಕ್ಷಸರನ್ನು ಸಂಹರಿಸುವ, ಹತ್ತು ಕೈಗಳಲ್ಲಿ ಮಾರಕ ಆಯುಧಗಳನ್ನು ಹೊಂದಿರುವ ಕಾಳಿಯಾಗಿ ಬದಲಾಗುತ್ತದೆ.

ಆ ಚರಣಗಳಲ್ಲಿ; ಹಿಂದು ಪ್ರಬಲ ಜಾತಿಯ ಒಂದು ಗುಂಪು ಮುಸ್ಲಿಮರನ್ನು ಕೊಲ್ಲುವಂತೆ, ಅವರ ಗುಡಿಸಲುಗಳನ್ನು ದೋಚುವಂತೆ, ಅವರ ಮಸೀದಿಗಳನ್ನು ಕೆಡವುವಂತೆ, ಮುಸ್ಲಿಂ ಮಹಿಳೆಯರನ್ನು ಸೆರೆಹಿಡಿದು ಹಾಗೂ ಸತ್ತ ಮುಸ್ಲಿಮರ ಮುಖಗಳ ಮೇಲೆ ಮುದ್ರೆ ಹಾಕುವಂತೆ ಹಿಂದುಗಳನ್ನು ಪ್ರಚೋದಿಸುತ್ತದೆ. ಈ ಕೃತ್ಯಗಳು ನಡೆಯುವವರೆಗೆ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಸ್ಥಗಿತಗೊಳಿಸುವುದಾಗಿಯೂ, ವಿಜಯದ ನಂತರ ವ್ಯವಸ್ಥೆಯನ್ನು ಮರುಸ್ಥಾಪಿಸುವುದಾಗಿಯೂ ಗೀತೆ ಭರವಸೆ ನೀಡುತ್ತದೆ. ಮುಸ್ಲಿಮರ ಮೇಲಿನ ರಕ್ತಪಾತವು ತಮ್ಮ ಅತ್ಯುನ್ನತ ಪವಿತ್ರ ಕರ್ತವ್ಯವಾಗಿದ್ದು, ಇದನ್ನು ದೇವತೆ ಸೂಚಿಸಿದ್ದಾಳೆಂದು ಬಡ ಹಿಂದುಗಳನ್ನು ನಂಬಿಸಲಾಗುತ್ತದೆ.

ಮಾತೃಭೂಮಿ ದೇವತೆಯು ಮೂರು ದೇವತೆಗಳಾದ ಜಗದ್ಧಾತ್ರಿ, ಕಾಳಿ ಮತ್ತು ದುರ್ಗಾ ಪ್ರತಿರೂಪವಾಗಿದ್ದಾಳೆ. ಆಕೆಯ ಮಕ್ಕಳು ಶತ್ರುವನ್ನು ಸದೆಬಡಿದು, ಆನಂತರ, ಆಕೆಯ ಹಿಂದಿನ ವೈಭವವನ್ನು ಮರುಕಳಿಸುವಂತೆ ಮಾಡಬೇಕು ಎಂದು ಪ್ರಚಾರ ಮಾಡಲಾಗುತ್ತದೆ.

ಗೀತೆಯಲ್ಲಿ ಪದಗಳ ಮೇಲಿರುವ ಬಂಕಿಮ್ ಅವರ ಅಪ್ರತಿಮ ಪಾಂಡಿತ್ಯವು, ಸಂಕುಚಿತ ಶಕ್ತಿ ಮತ್ತು ಭಾವೋದ್ರಿಕ್ತ ವಾಕ್ಚಾತುರ್ಯದಿಂದ ಓದುಗರನ್ನು ಆಕರ್ಷಿಸುತ್ತವೆ.

ಆದ್ದರಿಂದಲೇ, ನೆಹರು, ಸುಭಾಷ್ ಚಂದ್ರ ಬೋಸ್ ನೇತೃತ್ವದ ಕಾಂಗ್ರೆಸ್ ಸಮಿತಿ (1937), ಸಂವಿಧಾನ ರಚನಾ ಸಮಿತಿಗಳು ರಾಷ್ಟ್ರೀಯ ಗೀತೆಯಾಗಿ ವಂದೇ ಮಾತರಂ ಅನ್ನು ಆಯ್ಕೆ ಮಾಡುವಾಗ ಕೇವಲ ಎರಡು ಚರಣಗಳನ್ನು ಮಾತ್ರವೇ ಆರಿಸಿಕೊಂಡಿತು. ಪ್ರಚೋದನೆ, ಕೋಮುದ್ವೇಷ ಬಿತ್ತುವ ಉಳಿದ ಚರಣಗಳನ್ನು ಕಡೆಗಣಿಸಿತು.

ಆದರೆ, ಈಗ ಕೋಮುದ್ವೇಷವನ್ನೇ ತನ್ನ ಬಂಡವಾಳ, ಜೀವಾಳ ಮಾಡಿಕೊಂಡಿರುವ ಮೋದಿ ಸರ್ಕಾರ, ವಂದೇ ಮಾತರಂನ 150ನೇ ವರ್ಷಾಚರಣೆಯ ಹೆಸರಿನಲ್ಲಿ ಮುಸ್ಲಿಂ ದ್ವೇಷವನ್ನು ಪ್ರಚೋದಿಸುವ ವಂದೇ ಮಾತರಂನ ಎಲ್ಲ ಚರಣಗಳನ್ನೂ ಹಾಡುವಂತೆ ಪ್ರೇರೇಪಿಸುತ್ತಿದೆ. ಆ ಮೂಲಕ, ರಾಷ್ಟ್ರಗೀತೆಯನ್ನೂ ಹಿಂದೆ ಸರಿಸಿ, ದ್ವೇಷಪೂರಿತ ಗೀತೆಗೆ ಮೊದಲ ಆದ್ಯತೆ ನೀಡುತ್ತಿದೆ. ಎಲ್ಲ ರಾಜ್ಯಗಳಲ್ಲಿ ರಾಜ್ಯಪಾಲರ ಮೂಲಕ ಈ ಗೀತೆಯ ಎಲ್ಲ ಚರಣಗಳನ್ನೂ ಹೇರಲು ಹವಣಿಸುತ್ತಿದೆ.

ಆದಾಗ್ಯೂ, ವಂದೇ ಮಾತರಂ ಅನ್ನು ಕಡ್ಡಾಯವಾಗಿ ಹಾಡಲೇಬೇಕೆಂದು ಸಂವಿಧಾನ ಹೇಳುವುದಿಲ್ಲ. ರಾಷ್ಟ್ರಗೀತೆಯಂತೆ ವಂದೇ ಮಾತರಂಗೆ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆ, 1971 ಅಡಿಯಲ್ಲಿ ರಕ್ಷಣೆಯಾಗಲೀ, ಅವಮಾನಿಸಿದರೆ ಶಿಕ್ಷೆ ವಿಧಿಸುವ ನೀತಿಗಳಾಗಲೀ ಇಲ್ಲ.

ಇತ್ತೀಚೆಗೆ, ಸುಪ್ರೀಂ ಕೋರ್ಟ್ ಕೂಡ ''ವಂದೇ ಮಾತರಂ ಕುರಿತಾದ ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಕೇವಲ ಸಲಹೆ ಅಷ್ಟೇ. ಇದನ್ನು ಹಾಡಲೇಬೇಕು ಎಂದು ನಾಗರಿಕರನ್ನು ಬಲವಂತಪಡಿಸಲು ಬರುವುದಿಲ್ಲ. ಇದು ವ್ಯಕ್ತಿಯ ವೈಯಕ್ತಿಕ ವಿವೇಚನೆ ಮತ್ತು ಸ್ವಾತಂತ್ರ್ಯಕ್ಕೆ ಬಿಟ್ಟದ್ದು. ಹಾಡದಿದ್ದವರಿಗೆ ಯಾವುದೇ ಕಾನೂನಾತ್ಮಕ ಶಿಕ್ಷೆಯಿಲ್ಲ'' ಎಂದು ಸ್ಪಷ್ಟಪಡಿಸಿದೆ.

ಆದ್ದರಿಂದ, ಮೋದಿ ಸರ್ಕಾರದ ಕೋಮುವಾದಿ ತಂತ್ರಕ್ಕೆ ದಕ್ಷಿಣದ ರಾಜ್ಯಗಳು ಮಣೆ ಹಾಕುತ್ತಿಲ್ಲ. ದಕ್ಷಿಣ ರಾಜ್ಯಗಳ ಜೊತೆಗೆ ಈಶಾನ್ಯ ರಾಜ್ಯಗಳೂ ವಂದೇ ಮಾತರಂನ ದ್ವೇಷಪೂರಿತ ಚರಣಗಳ ವಿರುದ್ಧ ಸೆಟೆದುನಿಂತಿವೆ. ನಾಗಾಲ್ಯಾಂಡ್‌ನಲ್ಲಿ ಬಿಜೆಪಿಯ ಮಿತ್ರಪಕ್ಷ ನಾಗಾ ಪೀಪಲ್ಸ್ ಫ್ರಂಟ್ ಕೂಡ ವಂದೇ ಮಾತರಂನ ಪೂರ್ಣ ಚರಣಗಳನ್ನು ಹಾಡಬೇಕೆಂಬುದನ್ನು ಗಟ್ಟಿದನಿಯಲ್ಲಿ ವಿರೋಧಿಸಿದೆ.

ಸದ್ಯಕ್ಕೆ, ನಮ್ಮ ಮುಂದಿರುವ ಪ್ರಶ್ನೆ ಒಂದೇ: ಕೇರಳವು ವಂದೇ ಮಾತರಂನ ಪೂರ್ಣ ಗೀತೆಗೆ ಮಣೆ ಹಾಕಿಲ್ಲ. ತಮಿಳುನಾಡಿನಲ್ಲಿ ವಿಜಯ್ ಅವರು ಪೂರ್ತಿ ಗೀತೆ ಹಾಡಿ, ವಿರೋಧಕ್ಕೆ ತುತ್ತಾಗಿದ್ದಾರೆ. ಈಗ, ಕರ್ನಾಟಕದಲ್ಲಿ ಸದ್ಯದಲ್ಲೇ ಡಿ.ಕೆ ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅವರಿಗೆ ರಾಜ್ಯಪಾಲ ಥಾವರ್ ಚಂದ್ರ ಗೆಹ್ಲೋಟ್ ಅವರು ಪ್ರಮಾಣ ವಚನ ಬೋಧಿಸಲಿದ್ದಾರೆ. ಆ ಸಮಯದಲ್ಲಿಯೂ ವಂದೇ ಮಾತರಂ ವಿವಾದ ಮುನ್ನೆಲೆಗೆ ಬರುವ ಸಾಧ್ಯತೆ ದಟ್ಟವಾಗಿದೆ.

ವಂದೇ ಮಾತರಂನ ಮೊದಲ ಎರಡು ಚರಣಗಳನ್ನು ಹಾಡುವುದರಲ್ಲಿ ಕಾಂಗ್ರೆಸ್‌ಗೆ ಯಾವುದೇ ಗೊಂದಲವಿಲ್ಲ, ಯಾಕೆಂದರೆ, ಆ ಎರಡು ಚರಣಗಳನ್ನು ರಾಷ್ಟ್ರೀಯ ಗೀತೆಯಾಗಿ ಘೋಷಿಸಿದ್ದೇ ಕಾಂಗ್ರೆಸ್. ಆದರೆ, ಪೂರ್ಣಗೀತೆ ಹಾಡುವ ವಿಚಾರದಲ್ಲಿ ಡಿ.ಕೆ ಶಿವಕುಮಾರ್ ಏನು ಮಾಡಬಹುದು? ಕಾಂಗ್ರೆಸ್‌ನ ಸೈದ್ಧಾಂತಿಕ ಬದ್ಧತೆಯನ್ನು ಡಿ.ಕೆ ಶಿವಕುಮಾರ್ ಹೊಂದಿದ್ದರೆ, ಅವರೂ ಕೂಡ ಸಿದ್ದರಾಮಯ್ಯರಂತೆ ವಂದೇ ಮಾತರಂನ ಪೂರ್ಣ ಚರಣ ಹಾಡುವುದಕ್ಕೆ ಮಣೆ ಹಾಕಬಾರದು.

ತಮ್ಮದೇ ಪಕ್ಷ ಅಧಿಕಾರದಲ್ಲಿರುವ ಕೇರಳ ಮಾದರಿಯಲ್ಲಿ ವಂದೇ ಮಾತರಂ ಕಡ್ಡಾಯವಲ್ಲ ಎಂಬ ಕಾನೂನಾತ್ಮಕ ನಿಲುವಿಗೆ ಅಂಟಿಕೊಂಡು, ರಾಷ್ಟ್ರಗೀತೆಗೆ (ಜನ ಗಣ ಮನ) ಆದ್ಯತೆ ನೀಡಬೇಕು. ಇಲ್ಲವಾದಲ್ಲಿ, ರಾಜ್ಯದ ಎದುರು ಅಪಹಾಸ್ಯಕ್ಕೆ ತುತ್ತಾಗುವುದು ನಿಶ್ಚಿತ.

ದಾಖಲೆ ಮಟ್ಟದ ಜನಸಂಖ್ಯಾ ಕುಸಿತ; ದೇಶ ಉಳಿಸಲು ವಿದೇಶೀ ಕಾರ್ಮಿಕರ ಮೊರೆ ಹೋದ ಜಪಾನ್ !

ಈ ಮಹಾ ಬಿಕ್ಕಟ್ಟಿನಿಂದ ಹೊರಬರಲು ಜಪಾನ್ ಸರ್ಕಾರ ಉಚಿತ ಶಿಶುಪಾಲನಾ ಕೇಂದ್ರಗಳು, ಪೋಷಕರಿಗೆ ಹೆಚ್ಚಿನ ರಜೆ, ಆರ್ಥಿಕ ಭತ್ಯೆಯಂತಹ ಯೋಜನೆಗಳನ್ನು ಶುರು ಮಾಡಿದೆ. ಯುವಕ-ಯುವತಿಯರು ಮದುವೆಯಾಗುವಂತೆ ಪ್ರೋತ್ಸಾ ಹಿಸಲು ಸರ್ಕಾರವೇ ಅಧಿಕೃತ ಡೇಟಿಂಗ್ ಆಪ್‌ಗಳನ್ನು ಕೂಡ ಲಾಂಚ್ ಮಾಡಿದೆ. ಸೂಪರ್ ಕಂಪ್ಯೂಟರ್, ಬುಲೆಟ್ ಟ್ರೈನ್ ಹಾಗೂ ಅದ್ಭುತ ತಂತ್ರಜ್ಞಾನ ಹೊಂದಿರುವ ಜಪಾನ್‌ಗೆ, ಈಗ ತನ್ನದೇ ದೇಶವನ್ನು ಮುನ್ನಡೆಸಲು ಮನುಷ್ಯರ ಕೊರತೆ ಎದುರಾಗಿರುವುದು ಪ್ರಕೃತಿ ಮತ್ತು ಕಾಲ ಸೃಷ್ಟಿಸಿರುವ ವಿಚಿತ್ರ ವ್ಯಂಗ್ಯವೇ ಸರಿ.


ವಿಶ್ವದ ಅತ್ಯಾಧುನಿಕ ಹಾಗೂ ಅತಿ ದೊಡ್ಡ ಆರ್ಥಿಕತೆಗಳಲ್ಲಿ ಒಂದಾದ ಜಪಾನ್ ಸದ್ಯದ ಮಟ್ಟಿಗೆ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಆಂತರಿಕ ಬಿಕ್ಕಟ್ಟೊಂದನ್ನು ಎದುರಿಸುತ್ತಿದೆ. ಅದು ವೇಗವಾಗಿ ಕುಸಿಯುತ್ತಿರುವ ಅದರ ಜನಸಂಖ್ಯೆ. ಜಪಾನ್ ಸರ್ಕಾರದ ಇತ್ತೀಚಿನ ರಾಷ್ಟ್ರೀಯ ಜನಗಣತಿ ಹಾಗೂ ಅಧಿಕೃತ ಅಂಕಿ-ಅಂಶಗಳು ಇಡೀ ವಿಶ್ವವೇ ಅಚ್ಚರಿಪಡುವ ಸತ್ಯಗಳನ್ನು ಹೊರಹಾಕಿದ್ದು, ಪ್ರಧಾನಿ ಶಿಗೆರು ಇಶಿಬಾ ಅವರು ಇದನ್ನು ದೇಶದ ಪಾಲಿನ ''ನಿಶ್ಯಬ್ದ ತುರ್ತು ಪರಿಸ್ಥಿತಿ'' ( ) ಎಂದು ಕರೆದಿದ್ದಾರೆ. ಯುವ ಪೀಳಿಗೆಯು ಮದುವೆ ಮತ್ತು ಮಕ್ಕಳ ಹೆರುವಿಕೆಯಿಂದ ದೂರ ಉಳಿಯುತ್ತಿರುವುದು ಈ ಪರಿಸ್ಥಿತಿಗೆ ಪ್ರಮುಖ ಕಾರಣವಾಗಿ ಪರಿಣಮಿಸಿದೆ.

ಐದು ವರ್ಷಗಳಿಗೊಮ್ಮೆ ನಡೆಯುವ ಜಪಾನ್‌ನ ರಾಷ್ಟ್ರೀಯ ಜನಗಣತಿಯ ಪ್ರಾಥಮಿಕ ವರದಿಯ ಪ್ರಕಾರ, ದೇಶದ ಒಟ್ಟು ಜನಸಂಖ್ಯೆ 12.3 ಕೋಟಿಗೆ (123.05 ಮಿಲಿಯನ್) ಕುಸಿದಿದೆ. 2020ರ ಜನಗಣತಿಗೆ ಹೋಲಿಸಿದರೆ ಕೇವಲ ಐದೇ ವರ್ಷಗಳಲ್ಲಿ ಬರೋಬ್ಬರಿ 30.9 ಲಕ್ಷದಷ್ಟು ಜನಸಂಖ್ಯೆ ಕಡಿಮೆಯಾಗಿದೆ. ಇದು 1920ರಲ್ಲಿ ಜಪಾನ್ ಜನಗಣತಿ ಆರಂಭಿಸಿದ ನಂತರ ದಾಖಲಾದ ಅತ್ಯಂತ ಭೀಕರ ಇಳಿತವಾಗಿದ್ದು, ಶೇಕಡಾ 2.5 ರಷ್ಟು ತೀವ್ರ ಕುಸಿತ ದಾಖಲಿಸಿದೆ. ಈ ದರ ಮುಂಚಿನ 5 ವರ್ಷಗಳ ಕುಸಿತದ ದರಕ್ಕಿಂತ ಮೂರು ಪಟ್ಟು ವೇಗ ಪಡೆದುಕೊಂಡಿದ್ದು, ಜಾಗತಿಕ ಜನಸಂಖ್ಯೆಯ ಪಟ್ಟಿಯಲ್ಲಿ ಜಪಾನ್ 11ನೇ ಸ್ಥಾನದಿಂದ 12ನೇ ಸ್ಥಾನಕ್ಕೆ ಕುಸಿಯುವಂತೆ ಮಾಡಿದೆ.

ಜಪಾನ್‌ನ ಈ ದುಸ್ಥಿತಿಗೆ ಪ್ರಮುಖ ಕಾರಣ ಕುಸಿಯುತ್ತಿರುವ ಜನನ ಪ್ರಮಾಣ ಮತ್ತು ಹೆಚ್ಚುತ್ತಿರುವ ಮರಣ ಪ್ರಮಾಣಗಳ ನಡುವಿನ ಭಾರಿ ವ್ಯತ್ಯಾಸ. ಆರೋಗ್ಯ ಸಚಿವಾಲಯದ ಇತ್ತೀಚಿನ ವಾರ್ಷಿಕ ವರದಿಗಳ ಪ್ರಕಾರ, ಜಪಾನ್‌ನಲ್ಲಿ ವರ್ಷವೊಂದರಲ್ಲಿ ಜನಿಸಿದ ಒಟ್ಟು ಮಕ್ಕಳ ಸಂಖ್ಯೆ ಕೇವಲ 6,86,061 ಮಾತ್ರ. ಜಪಾನ್‌ನಲ್ಲಿ 1899ರಿಂದ ಜನನವನ್ನು ದಾಖಲಿಸಲಾಗುತ್ತಿದೆ. ಅಲ್ಲಿಂದ ದೇಶದಲ್ಲಿ ವಾರ್ಷಿಕ ಜನನ ಪ್ರಮಾಣ 7 ಲಕ್ಷಕ್ಕಿಂತ ಕೆಳಗೆ ಇಳಿದಿರುವುದು ಇದೇ ಮೊದಲು. ಮತ್ತೊಂದೆಡೆ, ಕೇವಲ ಜಪಾನಿ ಮೂಲ ಪ್ರಜೆಗಳ ಸಂಖ್ಯೆಯನ್ನೇ ಪರಿಗಣಿಸಿದರೆ ಒಂದೇ ವರ್ಷದಲ್ಲಿ 9,08,574 ಜನರು ಕಡಿಮೆಯಾಗಿದ್ದಾರೆ. ಇದು ಸತತ 16ನೇ ವರ್ಷದ ನಿರಂತರ ಕುಸಿತವಾಗಿದ್ದು, ಹುಬ್ಬೇರುವಂತೆ ಮಾಡಿದೆ.

ಇದರೊಂದಿಗೆ ಜಪಾನ್‌ನಲ್ಲಿ ಜಂಟಿ ಕುಟುಂಬ (ವಿಭಕ್ತ ಕುಟುಂಬ)ಗಳು ಮಾಯವಾಗಿ ಒಂಟಿ ಮನೆಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. 1970ರಲ್ಲಿ ಒಂದು ಕುಟುಂಬದಲ್ಲಿ ಸರಾಸರಿ 3.45 ಜನರಿದ್ದರೆ, ಈಗ ಅದು 2.15ಕ್ಕೆ ಕುಸಿದಿದೆ. ಅದರಲ್ಲೂ ರಾಜಧಾನಿ ಟೋಕಿಯೋದಲ್ಲಿ ಈ ಪ್ರಮಾಣ ಕೇವಲ 1.88 ರಷ್ಟಿದ್ದು, ಒಂಟಿಯಾಗಿ ವಾಸಿಸುವವರ ಸಂಖ್ಯೆ ಹೆಚ್ಚುತ್ತಿರುವುದನ್ನು ಗಮನಿಸಬಹುದು. ಒಟ್ಟು 47 ಪ್ರಾಂತ್ಯಗಳಲ್ಲಿ ಕೇವಲ ಟೋಕಿಯೋ ಮತ್ತು ಒಕಿನಾವಾ ಮಾತ್ರ ಜನಸಂಖ್ಯೆಯಲ್ಲಿ ಚೇತರಿಕೆ ಕಂಡಿದ್ದು, ಉಳಿದ 45 ಪ್ರಾಂತ್ಯಗಳ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಉದಾಹರಣೆಗೆ ಹೊಕ್ಕಾಯ್ಡೊ ಪ್ರಾಂತ್ಯವೊಂದರಲ್ಲೇ 2,39,000 ಪ್ರಜೆಗಳು ಕಡಿಮೆಯಾಗಿದ್ದಾರೆ.

ವಿಶ್ವ ಬ್ಯಾಂಕ್ ವರದಿಯ ಪ್ರಕಾರ, ಜಪಾನ್ ಇಡೀ ವಿಶ್ವದಲ್ಲೇ ಅತ್ಯಂತ ಹೆಚ್ಚು ವೃದ್ಧರನ್ನು ಹೊಂದಿರುವ ಎರಡನೇ



ದೇಶ (ಮೊದಲ ಸ್ಥಾನದಲ್ಲಿ ಮೊನಾಕೊ ಇದೆ). ಪ್ರಸ್ತುತ ಜಪಾನ್‌ನ ಒಟ್ಟು ಪ್ರಜೆಗಳಲ್ಲಿ ಶೇ.30ರಷ್ಟು ಜನರು 65 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಾಗಿದ್ದಾರೆ. ಆದರೆ, 15 ವರ್ಷದೊಳಗಿನ ಮಕ್ಕಳ ಪಾಲು ಕೇವಲ ಶೇ. 10 ರಷ್ಟಿದೆ. ಇತ್ತೀಚೆಗೆ ವಿಶ್ವದ ಅತ್ಯಂತ ಹಿರಿಯ ಮಹಿಳೆ, ಜಪಾನ್‌ನ ತಾಮಿಕೊ ಇಟೂಕಾ (116 ವರ್ಷ) ನಿಧನರಾದರು. ಜಪಾನ್‌ನಲ್ಲಿ ಜೀವಿತಾವಧಿ ಹೆಚ್ಚಿರುವುದು ಒಳ್ಳೆಯದೇ ಆದರೂ, ದುಡಿಯುವ ಯುವ ವರ್ಗ ಕಡಿಮೆಯಾಗಿ ವೃದ್ಧರ ಸಂಖ್ಯೆ ಹೆಚ್ಚುತ್ತಿರುವುದರಿಂದ ದೇಶದ ವೈದ್ಯಕೀಯ ಮತ್ತು ಸಾಮಾಜಿಕ ಕಲ್ಯಾಣ ವೆಚ್ಚಗಳು ಸರ್ಕಾರದ ಬೊಕ್ಕಸಕ್ಕೆ ಭಾರಿ ಹೊರೆಯಾಗುತ್ತಿವೆ.

ಈ ವೃದ್ಧಾಪ್ಯದ ಹೆಚ್ಚಳವು ಕೊಡೊಕುಶಿ () ಎಂಬ ಹೊಸ ಸಾಮಾಜಿಕ ಪಿಡುಗಿಗೆ ಕಾರಣವಾಗಿದೆ, ಇದರರ್ಥ ''ಯಾರೂ ಇಲ್ಲದೆ ಒಂಟಿಯಾಗಿ ಸಾಯುವುದು''. ಅನೇಕ ವೃದ್ಧರು ತಮ್ಮ ಮನೆಗಳಲ್ಲಿ ಒಂಟಿಯಾಗಿ ಮರಣ ಹೊಂದುತ್ತಾರೆ ಮತ್ತು ಅವರು ಮೃತಪಟ್ಟ ದಿನಗಳ ನಂತರವಷ್ಟೇ ವಿಷಯ ಬೆಳಕಿಗೆ ಬರುತ್ತದೆ. ಈ ಒಂಟಿತನದ ಸಮಸ್ಯೆಯನ್ನು ನಿವಾರಿಸಲು ಜಪಾನ್ ಸರ್ಕಾರ ಪ್ರತ್ಯೇಕವಾಗಿ ಒಂಟಿತನ ನಿವಾರಣಾ ಸಚಿವಾಲಯವನ್ನೇ ( ) ಸ್ಥಾಪಿಸಿದೆ. ಅಲ್ಲದೆ, ಯುವ ಕಾರ್ಮಿಕರ ಕೊರತೆಯಿಂದಾಗಿ ಜಪಾನ್‌ನ ಒಟ್ಟು ಕಾರ್ಮಿಕ ಬಲದಲ್ಲಿ ಶೇ. 13ಕ್ಕಿಂತ ಹೆಚ್ಚು ಜನ 65 ವರ್ಷ ದಾಟಿದ ವಯೋವೃದ್ಧರೇ ಇಂದಿಗೂ ಟ್ಯಾಕ್ಸಿ ಡ್ರೈವಿಂಗ್, ಸೆಕ್ಯೂರಿಟಿ ಮುಂತಾದ ಕೆಲಸಗಳಲ್ಲಿ ಮುಂದುವರಿದಿದ್ದಾರೆ.

ಜನಸಂಖ್ಯೆ ಕೊರತೆಯಿಂದಾಗಿ ಜಪಾನ್‌ನ ಗ್ರಾಮೀಣ ಭಾಗಗಳು ಸಂಪೂರ್ಣವಾಗಿ ನಿರ್ಜನವಾಗುತ್ತಿದ್ದು, ಭೂತ ಬಂಗಲೆಗಳ ಸಂಖ್ಯೆ ಹೆಚ್ಚಾಗಿದೆ. ಕಳೆದ ಎರಡು ದಶಕಗಳಲ್ಲಿ ಜಪಾನ್‌ನಲ್ಲಿ ಪಾಳುಬಿದ್ದ ಅಥವಾ ವಾರಸುದಾರರಿಲ್ಲದೆ ಕೈಬಿಟ್ಟ ಮನೆಗಳ (ಸ್ಥಳೀಯವಾಗಿ ಇವುಗಳನ್ನು ಅಕಿಯಾ ಎನ್ನಲಾಗುತ್ತದೆ) ಸಂಖ್ಯೆ ಯಾವ ಪ್ರಮಾಣದಲ್ಲಿ ಏರಿದೆಯೆಂದರೆ, ಬರೋಬ್ಬರಿ 40 ಲಕ್ಷದ ಗಡಿ ದಾಟಿದೆ. ನಗರ ಪ್ರದೇಶಗಳಿಗೆ ವಲಸೆ ಹೋದ ಯುವಕರು ತಮಗೆ ಪಿತ್ರಾರ್ಜಿತವಾಗಿ ಬಂದ ಗ್ರಾಮೀಣ ಮನೆಗಳನ್ನು ನವೀಕರಿಸಲು ಅಥವಾ ಅವುಗಳ ತೆರಿಗೆ ಕಟ್ಟಲು ಆಸಕ್ತಿ ತೋರುತ್ತಿಲ್ಲ. ಪರಿಣಾಮ ಹಳ್ಳಿಗಳ ಶಾಲಾ-ಕಾಲೇಜುಗಳು ಮತ್ತು ಆಸ್ಪತ್ರೆಗಳು ಮುಚ್ಚುತ್ತಿದ್ದು, ಇವುಗಳನ್ನು ಉಳಿಸಲು ಸರ್ಕಾರ ಈಗ ವಿದೇಶಿಗರಿಗೆ ಅತ್ಯಂತ ಕಡಿಮೆ ಬೆಲೆಗೆ ಅಥವಾ ಉಚಿತವಾಗಿ ನೀಡುವ ಯೋಜನೆಗಳನ್ನು ತರುತ್ತಿದೆ.

ಮನುಷ್ಯರ ಮತ್ತು ಕಾರ್ಮಿಕರ ಈ ತೀವ್ರ ಅಭಾವವನ್ನು ನೀಗಿಸಲು ಜಪಾನ್ ಈಗ ಕೃತಕ ಬುದ್ಧಿಮತ್ತೆ () ಮತ್ತು ರೋಬೋಟಿಕ್ಸ್ ಅನ್ನು ಅತಿಯಾಗಿ ನೆಚ್ಚಿಕೊಳ್ಳುತ್ತಿದೆ. ಆಸ್ಪತ್ರೆಗಳು ಮತ್ತು ವೃದ್ಧಾಶ್ರಮಗಳಲ್ಲಿ ವೃದ್ಧರನ್ನು ನೋಡಿಕೊಳ್ಳಲು ಕೇರ್‌ಬಾಟ್ಸ್ () ಎಂಬ ವಿಶೇಷ ರೋಬೋಟ್‌ಗಳನ್ನು ಬಳಸಲಾಗುತ್ತಿದೆ. ಹಾಗೆಯೇ, ಹೋಟೆಲ್‌ಗಳಲ್ಲಿ ಸಪ್ಲೈ ಮಾಡಲು, ಕೃಷಿ ಭೂಮಿಯಲ್ಲಿ ಕೆಲಸ ಮಾಡಲು ಮತ್ತು ಮೆಟ್ರೋ ನಿಲ್ದಾಣಗಳಲ್ಲಿ ಭದ್ರತೆಗಾಗಿ ಮನುಷ್ಯರ ಬದಲಿಗೆ ರೋಬೋಟ್‌ಗಳನ್ನು ನಿಯೋಜಿಸಲಾಗುತ್ತಿದೆ. ಆದರೆ ಇದು ಆರ್ಥಿಕತೆಯ ಮೇಲೆ ಭೀಕರ ಪರಿಣಾಮ ಬೀರುತ್ತಿದೆ. ತೆರಿಗೆದಾರರು ಕಡಿಮೆಯಾಗಿರುವುದರಿಂದ ಜಪಾನ್‌ನ ಜಿಡಿಪಿಗೆ ಹೋಲಿಸಿದರೆ ದೇಶದ ಒಟ್ಟು ಸಾಲದ ಅನುಪಾತ ಬರೋಬ್ಬರಿ ಶೇ. 260ಕ್ಕಿಂತಲೂ ಅಧಿಕವಾಗಿದೆ.

ಉತ್ಪಾದನೆ, ಹೋಟೆಲ್ ಉದ್ಯಮ ಹಾಗೂ ಚಿಲ್ಲರೆ ವ್ಯಾಪಾರ ವಲಯವನ್ನು ಉಳಿಸಿಕೊಳ್ಳಲು ಜಪಾನ್ ಈಗ ವಿದೇಶಿ ಕಾರ್ಮಿಕರನ್ನು ಅನಿವಾರ್ಯವಾಗಿ ನೆಚ್ಚಿಕೊಳ್ಳಬೇಕಾಗಿ ಬಂದಿದ್ದು, ಸದ್ಯ ದೇಶದಲ್ಲಿ ದಾಖಲೆಯ 36.7 ಲಕ್ಷ ವಿದೇಶಿ ನಿವಾಸಿಗಳಿದ್ದಾರೆ (ಒಟ್ಟು ಜನಸಂಖ್ಯೆಯ ಶೇ. 3 ರಷ್ಟು). ಆದರೆ, ಇದು ದೇಶದ ರಾಜಕೀಯದಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದೆ. ಹಣದುಬ್ಬರದಿಂದ ಕಂಗಾಲಾಗಿರುವ ಮತದಾರರನ್ನು ಸೆಳೆಯಲು ಅಲ್ಲಿ ''ಜಪಾನೀಸ್ ಫಸ್ಟ್'' ( ) ಎಂಬ ಹೊಸ ವಲಸೆ ವಿರೋಧಿ ಪಕ್ಷ ಉದಯಿಸಿದ್ದು, ವಿದೇಶಿಗರ ವಿರುದ್ಧ ಸುಳ್ಳು ವದಂತಿಗಳನ್ನು ಹರಡುತ್ತಿದೆ. ಮತ್ತೊಂದೆಡೆ, ಪ್ರಧಾನಿ ಸೇರಿದಂತೆ ಹಲವು ರಾಜಕೀಯ ನಾಯಕರು ವಿದೇಶಿಗರ ಒಳಹರಿವಿನ ವಿರುದ್ಧ ಕಠಿಣ ಕ್ರಮಗಳಿಗೆ ಒತ್ತಾಯಿಸುತ್ತಿದ್ದಾರೆ.

ಕೆಲವೇ ದಶಕಗಳ ಹಿಂದಿನ ಇತಿಹಾಸ ತೆಗೆದುಕೊಂಡರೆ, ಇಡೀ ಜಗತ್ತು ಜನಸಂಖ್ಯಾ ಸ್ಫೋಟ ( ) ಎಂಬ ಮಹಾ ಬಿಕ್ಕಟ್ಟಿನಿಂದ ತತ್ತರಿಸುತ್ತಿತ್ತು. ಸಂಪನ್ಮೂಲಗಳ ಕೊರತೆ, ಹಸಿವು ಮತ್ತು ಬಡತನಕ್ಕೆ ಜನಸಂಖ್ಯೆಯ ಮಿತಿಮೀರಿದ ಬೆಳವಣಿಗೆಯೇ ಕಾರಣ ಎಂದು ವಿಶ್ವಸಂಸ್ಥೆ ಸೇರಿದಂತೆ ಜಾಗತಿಕ ಸಂಸ್ಥೆಗಳು ಆತಂಕ ವ್ಯಕ್ತಪಡಿಸಿದ್ದವು. ಇದನ್ನು ನಿಯಂತ್ರಿಸಲು ಚೀನಾದ ಒಂದು ಮಗು ನೀತಿ (-) ಯಿಂದ ಹಿಡಿದು, ಭಾರತ ಸೇರಿದಂತೆ ಹಲವು ದೇಶಗಳು ನಾವು ಇಬ್ಬರು ನಮಗೆ ಇಬ್ಬರು ಎಂಬ ಕಠಿಣ ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಕಡ್ಡಾಯವಾಗಿ ಜಾರಿಗೆ ತಂದಿದ್ದವು. ಮನುಷ್ಯರ ಸಂಖ್ಯೆ ಹೆಚ್ಚಾಗಿ ಭೂಮಿಗೆ ಭಾರವಾಗುತ್ತಿದೆ ಎಂದು ಅಂದು ಇಡೀ ಜಗತ್ತು ಭೀತಿಗೊಳಗಾಗಿತ್ತು. ಆದರೆ, ಕಾಲಚಕ್ರ ಉರುಳಿದಂತೆ ಇಂದು ಜಾಗತಿಕ ಜನಸಂಖ್ಯಾ ಶಾಸ್ತ್ರವೇ ಸಂಪೂರ್ಣವಾಗಿ ಯು-ಟರ್ನ್ ಪಡೆದುಕೊಂಡಿದೆ!

ಅತಿ ನಿಯಂತ್ರಣದ ಅಡ್ಡಪರಿಣಾಮವೋ ಅಥವಾ ಬದಲಾದ ಜಾಗತಿಕ ಸವಾಲುಗಳೋ, ಅಂದು ಜನಸಂಖ್ಯೆಯನ್ನು ನಿಯಂತ್ರಿಸಲು ಹರಸಾಹಸ ಪಟ್ಟಿದ್ದ ಜಗತ್ತಿಗೆ, ಇಂದು ಅದೇ ಜನಸಂಖ್ಯೆಯನ್ನು ಉಳಿಸಿಕೊಳ್ಳುವುದು ಹೇಗೆ ಎಂಬ ಹೊಸ ತಲೆನೋವು ಶುರುವಾಗಿದೆ. ವಿಶೇಷವಾಗಿ ಜಪಾನ್. ಅತಿಯಾದ ನಗರೀಕರಣ, ವೃತ್ತಿಜೀವನದ ಒತ್ತಡ ಮತ್ತು ಬದಲಾದ ಜೀವನಶೈಲಿಯಿಂದಾಗಿ ಜಪಾನ್ ಮಾತ್ರವಲ್ಲದೆ ಚೀನಾ, ದಕ್ಷಿಣ ಕೊರಿಯಾ, ಯುರೋಪ್ ಹಾಗೂ ಸಿಂಗಾಪುರದಂತಹ ದೇಶಗಳೂ ಈಗ ಜನಸಂಖ್ಯೆ ಇಳಿತದ ಭೀಕರ ಸವಾಲನ್ನು ಎದುರಿಸುತ್ತಿವೆ. ಅಂದು ಜನಸಂಖ್ಯೆಯನ್ನು ತಗ್ಗಿಸಲು ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದ ಸರ್ಕಾರಗಳು, ಇಂದು ಮಗು ಹೆತ್ತರೆ ಕೈತುಂಬಾ ಹಣ, ಉಚಿತ ಶಿಕ್ಷಣ ನೀಡುವುದಾಗಿ ದಂಪತಿಗಳ ಹಿಂದೆ ಬೀಳುತ್ತಿರುವುದು ಇತಿಹಾಸದ ವಿಚಿತ್ರ. ಅತಿಯಾದ ಜನಸಂಖ್ಯಾ ನಿಯಂತ್ರಣ ನೀತಿಗಳು ದೀರ್ಘಾವಧಿಯಲ್ಲಿ ದೇಶವೊಂದನ್ನು ಹೇಗೆ ವೃದ್ಧಾಶ್ರಮವನ್ನಾಗಿ ಪರಿವರ್ತಿಸಬಲ್ಲದು ಎಂಬುದಕ್ಕೆ ಪ್ರಸ್ತುತ ಜಪಾನ್ ಎದುರಿಸುತ್ತಿರುವ ಬಿಕ್ಕಟ್ಟೇ ಜಗತ್ತಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಈ ಮಹಾ ಬಿಕ್ಕಟ್ಟಿನಿಂದ ಹೊರಬರಲು ಜಪಾನ್ ಸರ್ಕಾರ ಉಚಿತ ಶಿಶುಪಾಲನಾ ಕೇಂದ್ರಗಳು, ಪೋಷಕರಿಗೆ ಹೆಚ್ಚಿನ ರಜೆ, ಆರ್ಥಿಕ ಭತ್ಯೆಯಂತಹ ಯೋಜನೆಗಳನ್ನು ಶುರು ಮಾಡಿದೆ. ಯುವಕ-ಯುವತಿಯರು ಮದುವೆಯಾಗುವಂತೆ ಪ್ರೋತ್ಸಾ ಹಿಸಲು ಸರ್ಕಾರವೇ ಅಧಿಕೃತ ಡೇಟಿಂಗ್ ಆಪ್‌ಗಳನ್ನು ಕೂಡ ಲಾಂಚ್ ಮಾಡಿದೆ. ಆದರೆ, ಬದಲಾಗುತ್ತಿರುವ ಆಧುನಿಕ ಜೀವನಶೈಲಿ, ಮಕ್ಕಳನ್ನು ಸಾಕುವುದು ದುಬಾರಿ ಎಂಬ ಭಾವನೆ ಮತ್ತು ಕೆಲಸದ ಒತ್ತಡದಿಂದಾಗಿ ಯುವ ಜಪಾನಿಯರು ಇದ್ಯಾವುದಕ್ಕೂ ಮಣಿಯುವಂತೆ ಕಾಣುತ್ತಿಲ್ಲ. ಸೂಪರ್ ಕಂಪ್ಯೂಟರ್, ಬುಲೆಟ್ ಟ್ರೈನ್ ಹಾಗೂ ಅದ್ಭುತ ತಂತ್ರಜ್ಞಾನ ಹೊಂದಿರುವ ಜಪಾನ್‌ಗೆ, ಈಗ ತನ್ನದೇ ದೇಶವನ್ನು ಮುನ್ನಡೆಸಲು ಮನುಷ್ಯರ ಕೊರತೆ ಎದುರಾಗಿರುವುದು ಪ್ರಕೃತಿ ಮತ್ತು ಕಾಲ ಸೃಷ್ಟಿಸಿರುವ ವಿಚಿತ್ರ ವ್ಯಂಗ್ಯವೇ ಸರಿ.

ಎಸ್.ಐ.ಆರ್ ಅಲೆಮಾರಿಗಳ ಅಸ್ತಿತ್ವದ ಪ್ರಶ್ನೆ

ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ಕೇಳಲಾಗುವ ದಾಖಲೆಗಳಲ್ಲಿ ಅಲೆಮಾರಿ, ಅರೆ ಅಲೆಮಾರಿ, ಆದಿವಾಸಿಗಳ ಬಳಿ ಒಂದೇ ಒಂದು ದಾಖಲೆಯೂ ಇರಲು ಸಾಧ್ಯವಿಲ್ಲ. ಇವರ ಬಳಿ ಯಾವುದೇ ಮೂಲ ದಾಖಲಾತಿಗಳು ಇರದ ಕಾರಣಕ್ಕೇ ಈ ಸಮುದಾಯಗಳು ಆಡಳಿತದ ಮುಖ್ಯವಾಹಿನಿಯಿಂದ ದೂರ ಉಳಿದಿರುತ್ತಾರೆ. ಈ ನತದೃಷ್ಟ ಸಮುದಾಯಗಳ ಬಗ್ಗೆ ಎಸ್.ಐ.ಆರ್. ಮಾಡುವವರೂ ಚಿಂತಿಸುತ್ತಿಲ್ಲ, ಎಸ್.ಐ.ಆರ್. ಸಂದರ್ಭದಲ್ಲಿ ಎಚ್ಚರ ವಹಿಸಬೇಕೆಂದು ಜಾಗೃತಿ ಮೂಡಿಸುವವರೂ ಚಿಂತಿಸಿದಂತೆ ಕಾಣುತ್ತಿಲ್ಲ!

ಎಸ್.ಐ.ಆರ್ ಅಥವಾ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕರ್ನಾಟಕದಲ್ಲೂ ಇನ್ನೇನು ಆರಂಭವಾಗಲಿದೆ. ಬಿಜೆಪಿಯನ್ನು ಹೊರತುಪಡಿಸಿ ಕಾಂಗ್ರೆಸ್ ಸೇರಿದಂತೆ ಮಿಕ್ಕೆಲ್ಲ ಪಕ್ಷಗಳೂ ಆತಂಕಕ್ಕೆ ಒಳಗಾಗಿವೆ. ಇದಕ್ಕೆ ಕಾರಣ ಈಚೆಗೆ ನಡೆದ ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನ ವಿಧಾನಸಭಾ ಚುನಾವಣೆಯಲ್ಲಿ ಇದೇ ಎಸ್.ಐ.ಆರ್ ಕಾರಣಕ್ಕೆ ಟಿ.ಎಂ.ಸಿ. ಮತ್ತು ಡಿ.ಎಂ.ಕೆಗಳು ಇನ್ನಿಲ್ಲದಂತೆ ನೆಲ ಕಚ್ಚಿವೆ. ಈ ಸ್ಥಿತಿ ಕರ್ನಾಟಕದಲ್ಲಿನ ಕಾಂಗ್ರೆಸ್ಸಿಗೂ ಬರಬಹುದೆಂಬ ಆತಂಕದಿಂದ ಕಾಂಗ್ರೆಸ್ ಮತ್ತಿತರ ಬಿಜೆಪಿಯೇತರ ಪಕ್ಷಗಳು ಎಸ್.ಐ.ಆರ್‌ನಿಂದ ತಮ್ಮ ಪಕ್ಷದ ಮತದಾರರನ್ನು ಉಳಿಸುವ ಜವಾಬ್ದಾರಿ ಹೊತ್ತು ಕಾರ್ಯಾಚರಣೆಗೆ ಇಳಿದಿವೆ.

''ಎಸ್.ಐ.ಆರ್. ಎಂಬುದು ಈ ದೇಶಕ್ಕೆ ಅತಿಕ್ರಮವಾಗಿ ಆಗಮಿಸಿರುವ ನುಸುಳುಕೋರರನ್ನು ಹೊರಹಾಕಿ, ಈ ದೇಶದ ನಾಗರಿಕರನ್ನು ರಕ್ಷಿಸುವ ಪ್ರಕ್ರಿಯೆ'' ಎಂದು ಬಿಜೆಪಿ ಹೇಳಿದರೆ, ವಿರೋಧ ಪಕ್ಷಗಳು ''ಇದು ಸಂವಿಧಾನದ ಅಡಿಪಾಯವನ್ನೇ ಕೆಡವಿ ಹಾಕುವ, ಇಡೀ ಪ್ರಜಾತಂತ್ರವನ್ನೇ ಬುಡಮೇಲು ಮಾಡುವ, ದೇಶದ 12 ಕೋಟಿಗೂ ಹೆಚ್ಚು ಜನರನ್ನು ಅನಾಮಧೇಯರಾಗಿಸುವ, ಅದರಲ್ಲೂ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರೈಸ್ತರೊಂದಿಗೆ ದಲಿತ, ಆದಿವಾಸಿಗಳ ಹಕ್ಕುಗಳನ್ನೂ ಕಸಿಯುವ ಪ್ರಕ್ರಿಯೆ'' ಎನ್ನುತ್ತಿವೆ.

ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ಹದಿಮೂರು ದಾಖಲೆಗಳನ್ನು ಕೇಳುತ್ತಾರೆ ಓಟರ್ ಕಾರ್ಡ್, ರೇಶನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಪಾಸ್‌ಪೋರ್ಟ್, ಜಾತಿ ಪ್ರಮಾಣ ಪತ್ರ, ಆಸ್ತಿಯ ದಾಖಲೆ ಮುಂತಾಗಿ. ಅದರಲ್ಲೂ ಶಾಶ್ವತವಾಗಿ ವಾಸಿಸುತ್ತಿರುವ ದಾಖಲೆ ಮತ್ತು ಜಾತಿ ಸರ್ಟಿಫಿಕೇಟ್ ಕಡ್ಡಾಯ. ಈ ಎಲ್ಲವನ್ನೂ ಸ್ಥಿರ ಅಥವಾ ನೆಲೆನಿಂತ ಸಮುದಾಯಗಳು ನೀಡಬಹುದು. ಈ ಸಮುದಾಯಗಳಲ್ಲಿ ಆಸ್ತಿ, ಉದ್ಯೋಗ, ವಸತಿ, ವಿದ್ಯುತ್ ಸಂಪರ್ಕ, ನೀರಿನ ಬಿಲ್, ರೇಶನ್ ಕಾರ್ಡ್, ಮತದಾರರ ಚೀಟಿ, ಆಧಾರ್ ಕಾರ್ಡ್ ಮುಂತಾದ ದಾಖಲೆಗಳು ಇರುತ್ತವೆ. ಇಲ್ಲಿ ಗಂಭೀರವಾಗಿ ಯೋಚಿಸಬೇಕಾದುದು ಈ ದಾಖಲೆಗಳಲ್ಲಿ ಒಂದೂ ದಾಖಲೆ ಇರದ ಅಲೆಮಾರಿ, ಅರೆಅಲೆಮಾರಿ, ಆದಿವಾಸಿ, ವಲಸೆ ಕಾರ್ಮಿಕರ ಕುರಿತು. ಅದರಲ್ಲೂ ಒಂದು ನೆಲೆ ಎಂಬುದೇ ಇಲ್ಲದ ಸದಾ ಊರಿಂದ ಊರಿಗೆ ಸುತ್ತುತ್ತಾ ರೈಲ್ವೆ ಹಳಿಗಳ ಪಕ್ಕ, ಪಾಳು ಮಂಟಪಗಳಲ್ಲಿ, ಸ್ಮಶಾನದ ಸೆರಗಿನಲ್ಲಿ, ಕುರುಚಲು ಬಯಲುಗಳಲ್ಲಿ ಟೆಂಟು, ಗುಡಾರಗಳನ್ನು ಹಾಕಿಕೊಂಡು ಅಲೆಮಾರಿ ಜೀವನ ನಡೆಸುತ್ತಿರುವ ಸಮುದಾಯಗಳ ಕುರಿತು. ಈ ನತದೃಷ್ಟ ಸಮುದಾಯಗಳ ಬಗ್ಗೆ ಎಸ್.ಐ.ಆರ್. ಮಾಡುವವರೂ ಚಿಂತಿಸುತ್ತಿಲ್ಲ, ಎಸ್.ಐ.ಆರ್. ಸಂದರ್ಭದಲ್ಲಿ ಎಚ್ಚರ ವಹಿಸಬೇಕೆಂದು ಜಾಗೃತಿ ಮೂಡಿಸುವವರೂ ಚಿಂತಿಸಿದಂತೆ ಕಾಣುತ್ತಿಲ್ಲ!

2011ರ ಸೆನ್ಸಸ್ ಪ್ರಕಾರ ಕರ್ನಾಟಕದಲ್ಲಿ 6.96 % ಅಂದರೆ ಸುಮಾರು 45ರಿಂದ 50 ಲಕ್ಷ ಅಲೆಮಾರಿ ಮತ್ತು ಅರೆ ಅಲೆಮಾರಿ, ಆದಿವಾಸಿ, ವಲಸೆ ಕಾರ್ಮಿಕರೇ ಮುಂತಾದ ಸಮುದಾಯಗಳವರಿದ್ದಾರೆ. ಈ ಸಮುದಾಯಗಳು ಆದಿಯಿಂದಲೂ ಕರ್ನಾಟಕದಲ್ಲಿಯೇ ಬದುಕಿರುವ ಮೂಲನಿವಾಸಿ ಜನಾಂಗದವರಾಗಿದ್ದಾರೆ. ಈ ಅಲೆಮಾರಿ ಮತ್ತು ಅರೆಅಲೆಮಾರಿಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 51, ಪರಿಶಿಷ್ಟ ಪಂಗಡಕ್ಕೆ ಸೇರಿದ 23 ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ 46 ಅಲೆಮಾರಿ/ಅರೆ ಅಲೆಮಾರಿಗಳು ಕರ್ನಾಟಕ ರಾಜ್ಯದಲ್ಲಿ ಶತ-ಶತಮಾನಗಳಿಂದಲೂ ಕೃಷಿಕೂಲಿಗಳಾಗಿ, ಪ್ರದರ್ಶಕ ಕಲೆಗಳ ಕಲಾವಿದರಾಗಿ, ನಾಟಿ ಔಷಧಿಗಳನ್ನು ನೀಡುವ ವೈದ್ಯರಾಗಿ, ಹಾಡುತ್ತಾ, ಬೀದಿನಾಟಕ ಮಾಡುತ್ತಾ, ಭಿಕ್ಷೆ ಎತ್ತುತ್ತಾ ವಸತಿರಹಿತರಾಗಿ, ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಬದುಕುತಿದ್ದಾರೆ. ಮರದಡಿಯ ಮನುಷ್ಯರಾದ ಇವರು ನಿರ್ವಸತಿಗರಾಗಿ ಮತ್ತು ನಿರ್ವಾಸಿಗರಾಗಿ ಊರಿಂದ ಊರಿಗೆ ವಲಸೆ ಹೋಗುವರು. ಇವರ ಸಾಮಾಜಿಕ ಬದುಕಿನ ಸ್ಥಿತಿಗತಿಯ ಮೇಲೆ ಇವರ ವಲಸೆ ಮಾರ್ಗಗಳನ್ನು ಅವಲಂಬಿತವಾಗಿರುತ್ತವೆ.

ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ಕೇಳಲಾಗುವ ದಾಖಲೆಗಳಲ್ಲಿ ಇವರ ಬಳಿ ಒಂದೇ ಒಂದು ದಾಖಲೆಯೂ ಇರಲು ಸಾಧ್ಯವಿಲ್ಲ. ಇವರ ಬಳಿ ಯಾವುದೇ ಮೂಲ ದಾಖಲಾತಿಗಳು ಇರದ ಕಾರಣಕ್ಕೇ ಈ ಸಮುದಾಯಗಳು ಆಡಳಿತದ ಮುಖ್ಯವಾಹಿನಿಯಿಂದ ದೂರ ಉಳಿದಿರುತ್ತಾರೆ. ಭೂಮಿಯೇ ಇಲ್ಲದವರ ಬಳಿ ಭೂದಾಖಲೆಗಳು ಹೇಗಿರಲು ಸಾಧ್ಯ? ಮನೆಮಠವಿಲ್ಲದೆ ಟೆಂಟು, ಗುಡಾರ, ಶೆಡ್ಡುಗಳಲ್ಲಿ ವಾಸಿಸುವವರಿಗೆ ಮನೆಯ ದಾಖಲೆ ಎಲ್ಲಿಂದ ಬರಬೇಕು? ಬದುಕಿಗಾಗಿ ವಲಸೆ ಹೋಗುವವರು, ಅಲೆಮಾರಿ ಜೀವನ ಸಾಗಿಸುವವರು ಯಾವುದೇ ದಾಖಲಾತಿಗಳು ಇಲ್ಲದ ಕಾರಣಕ್ಕೇ ಇವರಿಗೆ ಸರ್ಕಾರಿ ಭಾಗ್ಯಗಳೂ ಕೂಡ ಸಿಗದೆ ಈ ಕುಟುಂಬಗಳು ಅದರಿಂದಲೂ ವಂಚಿತವಾಗಿರುತ್ತವೆ.

ಹಾಗಾದರೆ ಇಂತಹ ಅಲೆಮಾರಿಗಳಿಗೆ ಯಾವುದೇ ದಾಖಲೆಗಳು ಇಲ್ಲದಿರುವುದಕ್ಕೆ ಕಾರಣ ಸರ್ಕಾರ ಎಂಬುದು ನಗ್ನಸತ್ಯ. ಸ್ವತಂತ್ರ ಬಂದಾಗಿನಿಂದಲೂ ಈ ಸಮುದಾಯಗಳು ತುಂಡು ಭೂಮಿಗಾಗಿ ಅಂಗಲಾಚುತ್ತಿವೆ. ತಲೆ ಮೇಲೊಂದು ಸೂರಿಗಾಗಿ ಇನ್ನಿಲ್ಲದಷ್ಟು ನೆಲಕ್ಕೆ ತಲೆಬಾಗಿ ಬೇಡುತ್ತಿವೆ. ಸರ್ಕಾರ ಈ ಎಪ್ಪತ್ತು ವರ್ಷಗಳಲ್ಲಿ ಇವರಿಗೆ ಭೂಮಿಯನ್ನೋ ಮನೆಯನ್ನೋ ಕೊಟ್ಟಿದ್ದರೆ ಇಂದು ಇವರ ಬಳಿ ಚುನಾವಣಾ ಆಯೋಗ ಕೇಳುವ ಕನಿಷ್ಠ ದಾಖಲೆಗಳು ಇರುತ್ತಿದ್ದವು.

ಎಸ್.ಐ.ಆರ್.ಪ್ರಕ್ರಿಯೆ ನಡೆಸುವವರು ''ಕನಿಷ್ಠ ನಿಮ್ಮ ಜಾತಿ ಸರ್ಟಿಫಿಕೇಟ್ ಕೊಡಿ'' ಎನ್ನುತಿದ್ದಾರೆ. ಇಲ್ಲಿ ಜಾತಿ ಪ್ರಮಾಣ ಪತ್ರ ನೀಡಲೂ ಕೂಡ ನೂರೆಂಟು ಗೊಂದಲಗಳಿವೆ. ಈ ಅಲೆಮಾರಿ ಸಮುದಾಯಗಳಿಗೆ ಜಾತಿಯ ಅಸ್ಮಿತೆ ಇಲ್ಲದ ಕಾರಣಕ್ಕೆ ಇವರಿಗೆ ಜಾತಿ ಸರ್ಟಿಫಿಕೇಟ್ ಅನ್ನು ಸಮರ್ಪಕವಾಗಿ ಕೊಡಲಾಗುತ್ತಿಲ್ಲ ಎಂದು ತಹಸೀಲ್ದಾರರು ವಾದಿಸುತ್ತಾರೆ. ಒಂದೇ ಜಾತಿಯನ್ನು ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಲ್ಲಿ ಕರೆಯುತ್ತಾರೆ, ಆದ್ದರಿಂದ ಜಾತಿ ಸರ್ಟಿಫಿಕೇಟ್ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಸಂಭಂದಪಟ್ಟ ಅಧಿಕಾರಿಗಳು ಹೇಳುತ್ತಾರೆ. ಇದರೊಂದಿಗೆ ಒಂದೇ ಜಾತಿ ವಿವಿಧ ಹೆಸರುಗಳೊಂದಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಪಟ್ಟಿಗಳಲ್ಲಿ ಹಂಚಿಹೋಗಿರುವುದರಿಂದ ಜಾತಿ ಸರ್ಟಿಫಿಕೇಟ್ ನೀಡಲು ಕಷ್ಟವಾಗುತ್ತಿದೆ ಎಂಬುದು ಅಧಿಕಾರಿಗಳ ಸಮರ್ಥನೆ. ಈ ಗೊಂದಲಗಳನ್ನು ಪರಿಹರಿಸಲು ಹಿಂದುಳಿದ ವರ್ಗಗಳ ಆಯೋಗ ಎಂದೋ ನೀಡಿರುವ ಸಲಹೆಗಳನ್ನು ಸರ್ಕಾರ ಇಂದಿಗೂ ತೆರೆದು ಕೂಡ ನೋಡಿಲ್ಲ! ಅಲೆಮಾರಿಗಳಲ್ಲಿ ಜಾತಿ ಸರ್ಟಿಫಿಕೇಟ್ ಗೊಂದಲ ಪರಿಹರಿಸಲು ಆಯೋಗವೊಂದನ್ನು ರಚಿಸಿ ಈ ಸಮಸ್ಯೆಗೆ ಪರಿಹಾರ ತನ್ನಿ ಎಂದು ಅಲೆಮಾರಿಗಳು ಅನೇಕ ದಿನಗಳಿಂದ ಮುಖ್ಯಮಂತ್ರಿಗಳನ್ನು ಬೇಡುತ್ತಲೇ ಇದ್ದಾರೆ. ಮುಖ್ಯಮಂತ್ರಿಗಳಿಗೆ ಇದು ಗಂಭೀರವಾದ ವಿಚಾರ ಅನಿಸದಿರುವುದು ದುರಂತ. ಈ ಅಲೆಮಾರಿಗಳಿಗೆ ಕನಿಷ್ಠ ಜಾತಿ ಸರ್ಟಿಫಿಕೇಟ್ ಸಿಕ್ಕಿದ್ದರೆ ಇಂದು ಇವರು ಮತದಾರರ ಪರಿಷ್ಕರಣೆಯಲ್ಲಿ ಕಾಣಿಸಿಕೊಳ್ಳುತಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR